
Swabhimani Sahakari
Pages - 28, ₹12

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 03
March - 2018

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



ವರ್ಷಾದಿಯ ತಿಳಿನಗೆಯ ಮೊಗವೆ
ಶುಭ ಯುಗಾದಿ ಕರೆವ ಸೊಗವೆ
ಋತುಗಳ ಗಣನಾಯಕ
ಶರಣೆನ್ನುವೆ ಶುಭದಾಯಕ.
......
ಎರಡು ದಿನದ ಹಬ್ಬದಂದು
ಬೆಳಕಿನಲ್ಲಿ ಬಾಳು ಮಿಂದು
ಮೊದಲ ಚಂದ್ರ ವೀಕ್ಷಣೆ
ಜನಕೆ ತರಲಿ ರಕ್ಷಣೆ

–ಕೆ.ಎಸ್.ನಿಸಾರ್ ಅಹಮದ್

ಮಾರ್ಚ್ 8
ಅಂತರರಾಷ್ಟ್ರೀಯ
ಮಹಿಳಾ ದಿನ

- ಸೌಹಾರ್ದ ಸಹಕಾರಿಗಳ ಸಂಖ್ಯೆ : 4242
- ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1111



# ಸೌಹಾರ್ದ ಸಹಕಾರಿಗಳ ಬಹುದಿನಗಳ ಆಗ್ರಹದ ಬೇಡಿಕೆ ಈಡೇರಿಕೆಗೆ ಕ್ರಮ – ಕಾಮನ್ ಸಾಫ್ಟ್‌ವೇರ್ ಸಿದ್ಧತೆ

**ಆತ್ಮೀಯ ಸಹಕಾರಿ ಬಂಧುಗಳೇ,**

ಎಲ್ಲಾ ಸಹಕಾರಿ ಬಂಧುಗಳಿಗೆ ಯುಗಾದಿ, ಶ್ರೀರಾಮ ನವಮಿ, ಮಹಾವೀರ ಜಯಂತಿ ಹಾಗೂ ಗುಡ್ ಫ್ರೈಡೇ ದಿನದ ಹಾರ್ದಿಕ ಶುಭಾಷಯಗಳು. ವಿಳಂಬಿ ಸಂವತ್ಸರ ತಮಗೆಲ್ಲಾ ಶುಭವನ್ನುಂಟು ಮಾಡಲಿ. ಈ ನೂತನ ಸಂವತ್ಸರದಲ್ಲಿ ತಮ್ಮ ಎಲ್ಲಾ ಕಾರ್ಯಗಳು ನಿರ್ವಿಘ್ನವಾಗಿ ನೆರವೇರಲಿ, ದೇವರು ತಮಗೆ ಹೆಚ್ಚಿನ ಶಕ್ತಿಯನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಈಗ 17 ವರ್ಷಗಳು. ರಾಜ್ಯದಲ್ಲಿ 4240ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಪ್ರಾರಂಭವಾಗಿ 16 ವರ್ಷಗಳು ಕಳೆದಿವೆ. ಸೌಹಾರ್ದ ಸಹಕಾರಿಗಳ ಪ್ರಗತಿಯ ವೇಗ ಗಮನಾರ್ಹ. ನೂತನವಾಗಿ ಪ್ರಾರಂಭವಾಗುವ ಪ್ರತಿಯೊಂದು ಸಹಕಾರಿಯು ಒಂದನೆಯ ದಿನದಿಂದ ಗಣಕೀಕರಣದ ಮೂಲಕವೇ ಲೆಕ್ಕಪತ್ರಗಳ ನಿರ್ವಹಣೆ, ಪತ್ರ ವ್ಯವಹಾರ ಮಾಡುವುದು ಈ ಸೌಹಾರ್ದ ಸಹಕಾರಿ ಕ್ಷೇತ್ರದ ವಿಶೇಷ. ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳು ಸದಸ್ಯ ಕೇಂದ್ರೀಕೃತ ಹಾಗೂ ಅಭಿವೃದ್ಧಿ ಪರವಾಗಿದ್ದು, ಬಡ್ಡಿಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡುವ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಕಾರ್ಯಚಟುವಟಿಕೆಗಳನ್ನೇ ಕಾಣುತ್ತೇವೆ. ಸ್ಥಳೀಯ ನಿವೃತ್ತ ಬ್ಯಾಂಕ್ ಅಧಿಕಾರಿಗಳ ಹಾಗೂ ಸಹಕಾರ ಇಲಾಖಾಧಿಕಾರಿಗಳ ಅನುಭವದ ಆಧಾರದ ಮೇಲೆ ಒಂದೊಂದು ಸಹಕಾರಿಯಲ್ಲಿ ಒಂದೊಂದು ವಿಧವಾದ ಲೆಕ್ಕಪತ್ರಗಳ ನಮೂನೆಗಳು, ವ್ಯವಹಾರಗಳು, ವೈಶಿಷ್ಟ್ಯತೆಗಳು ಇರುವುದು, ವಿಶೇಷವಾಗಿ ಇವೆಲ್ಲವುಗಳಿಗೆ ಅವಶ್ಯಕವಾಗುವ ಸಾಫ್ಟ್‌ವೇರ್‌ಗಳನ್ನು ವಿವಿಧ ಕಂಪನಿಗಳಿಂದ ಖರೀದಿಸಿ, ಅನುಕೂಲ ಮಾಡಿಕೊಂಡವರಿಗಿಂತ ತೊಂದರೆ ಪಡುತ್ತಿರುವವರೇ ಹೆಚ್ಚು.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಳೆದ ಹಲವಾರು ವರ್ಷಗಳಿಂದ ಆಗ್ರಹದ ಬೇಡಿಕೆ ಇರುವುದನ್ನು ಗಮನಿಸಿದ ಪ್ರಸಕ್ತ ಆಡಳಿತ ಮಂಡಲಿಯವರು ತಮ್ಮ ಕ್ರಿಯಾ ಯೋಜನೆಯಲ್ಲಿ ಪ್ರಕಟಿಸಿದಂತೆ ಸೌಹಾರ್ದ ಸಹಕಾರಿಗಳಿಗಾಗಿ ಕಾಮನ್ ಸಾಫ್ಟ್‌ವೇರ್ ಅನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ದಿನಾಂಕ 19–12–2017ರಂದು ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಪ್ರಾರಂಭ ಮಾಡಿದೆ. ಆಸಕ್ತ ಸಾಫ್ಟ್‌ವೇರ್ ಕಂಪನಿಗಳಿಂದ ಅರ್ಜಿ ಸಲ್ಲಿಸಲು ದಿನಾಂಕ 10 ಜನವರಿ 2018 ಕೊನೆಯ ದಿನವಾಗಿತ್ತು. 25 ಕಂಪನಿಗಳು ಅರ್ಜಿ ಸಲ್ಲಿಸಿರುವುದನ್ನು ತಾಂತ್ರಿಕ ಪರಿಣಿತರಿಂದ ಪರಿಶೀಲಿಸಿದ ನಂತರ 17 ಕಂಪನಿಗಳಿಗೆ ಇದೇ ದಿನಾಂಕ 08–02–2018ರಂದು ಪ್ರಾಯೋಗಿಕ ಪ್ರದರ್ಶನ (ಡೆಮೋಗಾಗಿ) ನೀಡಲು ಆಯ್ಕೆ ಮಾಡಲಾಯಿತು.

ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ 4 ತಂಡಗಳನ್ನಾಗಿ ಮಾಡಿ, ಡೆಮೋ ವ್ಯವಸ್ಥೆ ಮಾಡಲಾಗಿತ್ತು. ಈ ಪ್ರದರ್ಶನದಲ್ಲಿ ತಂತ್ರಾಂಶ ಪರಿಣಿತರನ್ನು, ಸಂಯುಕ್ತ ಸಹಕಾರಿಯ ನಿರ್ದೇಶಕರನ್ನು, ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳನ್ನು ಹಾಗೂ ರಾಜ್ಯದ ಆಯ್ದ ಸಹಕಾರಿ ಸಂಸ್ಥೆಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಭಾಗವಹಿಸಿ, ಅನಿಸಿಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಈ ಪ್ರಕ್ರಿಯೆಯ ನಂತರ 13 ಕಂಪನಿಗಳನ್ನು ಹೆಚ್ಚಿನ ಸಾಮರ್ಥ್ಯ ಹಾಗೂ ಮಾಹಿತಿ ಸಂಗ್ರಹಕ್ಕಾಗಿ ಆಯ್ಕೆ ಮಾಡಲಾಗಿದೆ. ಇವುಗಳ ಪರಿಶೀಲನೆ ನಂತರ ಆಡಳಿತ ಮಂಡಲಿಯ ಶಿಫಾರಸ್ಸಿನಂತೆ ಕಾಮನ್ ಸಾಫ್ಟ್‌ವೇರ್ ಅನ್ನು ಸಿದ್ಧಪಡಿಸಲು ಕಂಪನಿಯನ್ನು ಆಯ್ಕೆ ಮಾಡಿ, ಮುಂದಿನ ಕ್ರಮವಿಡಲಾಗುವುದು. ಸೌಹಾರ್ದ ಸಹಕಾರಿಗಳ ಬಹುದಿನದ ಬೇಡಿಕೆ ಈಡೇರಿಸುವಲ್ಲಿ ಆಡಳಿತ ಮಂಡಲಿಯು ತೆಗೆದುಕೊಂಡ ಕ್ರಮಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸುತ್ತೇನೆ.

▸▸ **ಬಿ.ಹೆಚ್. ಕೃಷ್ಣಾರೆಡ್ಡಿ,** ಅಧ್ಯಕ್ಷರು

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಕಳೆದ ಹಲವಾರು ವರ್ಷಗಳಿಂದ ಆಗ್ರಹದ ಬೇಡಿಕೆ ಇರುವುದನ್ನು ಗಮನಿಸಿದ ಪ್ರಸಕ್ತ ಆಡಳಿತ ಮಂಡಲಿಯವರು ತಮ್ಮ ಕ್ರಿಯಾ ಯೋಜನೆಯಲ್ಲಿ ಪ್ರಕಟಿಸಿದಂತೆ ಸೌಹಾರ್ದ ಸಹಕಾರಿಗಳಿಗಾಗಿ ಕಾಮನ್ ಸಾಫ್ಟ್‌ವೇರ್ ಅನ್ನು ಸಿದ್ಧಪಡಿಸುವ ಪ್ರಕ್ರಿಯೆಯನ್ನು ದಿನಾಂಕ 19–12–2017ರಂದು ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಪ್ರಾರಂಭ ಮಾಡಿದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒ ಳ ಪು ಟ ಗ ಳ ಲ್ಲಿ . . .

ಜ್ಞಾನ ಜ್ಯೋತಿ ........ 4
ಏಕರೂಪದ ಜಿಎಸ್ಟಿ ಅಸಾಧ್ಯ : ಅರುಣ್ ಜೇಟ್ಲಿ ........ 5
ಸಂಯುಕ್ತ ಸಹಕಾರಿ ಸಮಾಚಾರಗಳು ........ 6-8
ಸಂಯುಕ್ತ ಸಹಕಾರಿಯ ಜಿಲ್ಲಾ ಸಂಪರ್ಕ ಕಛೇರಿ ..... 9-10
ಆದೇಶ ........ 13
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 16-18
ಸೌಹಾರ್ದ ಸಹಕಾರಿ ಕಾಯ್ದೆ 1997 - ಸಹಕಾರಿಗಳ ಲೆಕ್ಕಪತ್ರಗಳ ಪರಿಶೋಧನೆ ........ 19
ನಿಮ್ಮ ಪ್ರಶ್ನೆ - ನಮ್ಮ ಉತ್ತರ ........ 20
ವಾರ್ಷಿಕ ಕಾರ್ಯಸೂಚಿ ........ 21
ಬ್ಯಾಂಕಿಂಗ್ ನ್ಯೂಸ್ ........ 24
ಹಣಕಾಸು ನಿರ್ಣಯ ಮತ್ತು ಠೇವಣಿ ವಿಮೆ ಮಸೂದೆ, 2017 ........ 25
ಆರ್‌ಬಿಐ ನ್ಯೂಸ್ ........ 28

# ಸಂಪಾದಕೀಯ

## ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ತಂತ್ರಜ್ಞಾನ ಅಳವಡಿಕೆಗೆ ಸಹಾಯ ಕೇಂದ್ರ (Help Center for Technology Assistance to Urban Cooperative Banks) ವಿಚಾರ ಸ್ವಾಗತಾರ್ಹ

ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಿಗಾಗಿ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮದಲ್ಲಿ ಹಲವಾರು ವಿಚಾರಗಳ ಬಗ್ಗೆ ಅತಿಥಿ ಗಣ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿರುವುದು ಈ ಬ್ಯಾಂಕುಗಳ ಪ್ರಗತಿಗೆ ಹಾಗೂ ಉತ್ತಮ ಗುಣಮಟ್ಟದ ಕಾರ್ಯನಿರ್ವಹಣೆಗೆ ತಳಹದಿಯಾಗುವುದರಲ್ಲಿ ಸಂದೇಹವಿಲ್ಲ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರತಿದಿನ ಬದಲಾವಣೆಗಳು ಬರುತ್ತಿವೆ. ತಂತ್ರಜ್ಞಾನಗಳ ಬಳಕೆ ಹೆಚ್ಚಾಗುತ್ತಿದೆ. ಅದರಲ್ಲೂ ಡಿಜಿಟಲೀಕರಣ ವ್ಯವಸ್ಥೆಯನ್ನು ಬರಮಾಡಿಕೊಳ್ಳುತ್ತಿರುವ ನಮ್ಮ ಹಣಕಾಸು ವ್ಯವಸ್ಥೆಯಲ್ಲಿ ಬ್ಯಾಂಕುಗಳ ಪಾತ್ರ ಅತ್ಯಂತ ಮಹತ್ವದ್ದು. ಈ ವ್ಯವಸ್ಥೆಯ ಜೊತೆಗೆ ಪಟ್ಟಣ ಸಹಕಾರಿ ಬ್ಯಾಂಕುಗಳು, ಸೌಹಾರ್ದ ಸಹಕಾರಿ ವ್ಯವಸ್ಥೆಯಲ್ಲಿನ ಬ್ಯಾಂಕುಗಳು ಓಡುವುದನ್ನು ರೂಢಿಸಿಕೊಳ್ಳದಿದ್ದರೆ ವ್ಯವಸ್ಥೆಯಿಂದ ಹೊರಗುಳಿಯಬೇಕಾದೀತು. ಅದಕ್ಕಾಗಿ ನಿರಂತರ ಈ ತಂತ್ರಜ್ಞಾನದ ಅಧ್ಯಯನ ಅವಶ್ಯಕ.

ರಾಜ್ಯದ ಸೌಹಾರ್ದ ಸಹಕಾರಿ ವ್ಯಾಪ್ತಿಯಲ್ಲಿ ಬರುವ 18 ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಿಗಾಗಿ ದಿನಾಂಕ 16-02-2018ರಂದು ಆಯೋಜಿಸಲಾಗಿದ್ದ ಆಡಳಿತ ಪರಿಣಿತಿ ತರಬೇತಿಯ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತೆ ಈ ಬ್ಯಾಂಕುಗಳಿಗೆ ನಿರಂತರವಾಗಿ ಬದಲಾಗುತ್ತಿರುವ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡುವುದಕ್ಕಾಗಿ ಸಂಯುಕ್ತ ಸಹಕಾರಿಯಲ್ಲಿ ಒಂದು ಸಹಾಯ ಕೇಂದ್ರವನ್ನು (Help Center for Technology Assistance to Urban Cooperative Banks) ಪ್ರಾರಂಭಿಸಲು ಚಿಂತನೆ ನಡೆದಿದೆ ಎಂದು ತಿಳಿಸಿರುವ ವಿಚಾರ ಸ್ವಾಗತಾರ್ಹ.

ಈ ವಿಚಾರವನ್ನು ಕಾರ್ಯಗತ ಮಾಡುವಲ್ಲಿ ಪ್ರಸಕ್ತ ಬ್ಯಾಂಕಿಂಗ್ ಕ್ಷೇತ್ರದ ತಂತ್ರಜ್ಞಾನ ಪರಿಣಿತರ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರ ಜೊತೆಗೆ ಸಮಾಲೋಚನಾ ಸಭೆಯನ್ನು ನಡೆಸಿ, ಸಹಾಯ ಕೇಂದ್ರದ ಕೆಲಸ ಕಾರ್ಯಗಳ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯನಿರತರಾಗುವುದು ಅಗತ್ಯ.

ಈ ಬಗ್ಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬ್ಯಾಂಕುಗಳು ತಮ್ಮ ಸಲಹೆ ಹಾಗೂ ಅಭಿಪ್ರಾಯಗಳನ್ನು ಸಂಯುಕ್ತ ಸಹಕಾರಿಗೆ ತಿಳಿಸಿದಾಗ ಸಂಯುಕ್ತ ಸಹಕಾರಿಯು ಮುಂದಿನ ಕ್ರಮವಿಡಲು ಸಾಧ್ಯವಾಗುತ್ತದೆ. ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಈ ವ್ಯವಸ್ಥೆಯನ್ನು ಪ್ರಾರಂಭಿಸುವುದು ಒಂದು ಮಹತ್ವದ ಹಾಗೂ ಇತರರಿಗೂ ಮಾದರಿ ಹೆಜ್ಜೆ ಎನಿಸುತ್ತದೆ.

## ಆಚಾರ, ವಿಚಾರ ಒಂದಾಗಿರಲಿ

ಈ ಜಗತ್ತಿನಲ್ಲಿ ಉಪದೇಶವನ್ನು ಧಾರಾಳವಾಗಿ ಕೊಡುವಂತೆ ಬೇರೆ ಇನ್ನೇನೂ ಕೊಡಲಾಗದು. ಆದರೆ, ಆ ಉಪದೇಶದಂತೆ ನಡೆದುಕೊಳ್ಳುವುದು ಅಷ್ಟು ಸುಲಭವಾದುದಲ್ಲ. ಅದಕ್ಕೆಂದೇ 'ನುಡಿದ ನಡೆ, ಇದೇ ಜನ್ಮದ ಕಡೆ' ಎಂದು ಬಲ್ಲವರು ಹೇಳಿದರು. ಈ ಪ್ರಪಂಚದಲ್ಲಿ ಉಪದೇಶವನ್ನು ಕೊಡುವವರ ಸಂಖ್ಯೆಯೇನು ಕಡಿಮೆಯೇನಲ್ಲ. ಆದರೆ, ತಾವು ಮಾಡಿದ ಉಪದೇಶದಂತೆ ನಡೆದವರು ವಿರಳಾತಿ ವಿರಳ. ನುಡಿದಂತೆ ಬೆರಳೆಣಿಕೆಯಲ್ಲಿ ಎಲ್ಲೋ ಒಬ್ಬೊಬ್ಬರು ಕಾಣ ಸಿಗುತ್ತಾರೆ. ಅವರೇ ಲೋಕಪೂಜ್ಯರಾದ ಶರಣರು, ಮಹಂತರು, ಸಂತರು. ಹಾಗೆ ನೋಡಿದರೆ ಅವರು ಉಪದೇಶ ಮಾಡಿದ್ದೇ ಕಡಿಮೆ. ಅವರ ಜೀವನವೇ ಒಂದು ಸಂದೇಶ–ಉಪದೇಶವಾಗಿತ್ತು. ಅವರು ನುಡಿದು ನಡೆದರು ಅನ್ನುವುದಕ್ಕಿಂತ ನಡೆದು ನುಡಿದರು. ಇದನ್ನು ನಾವು ಎಂದಿಗೂ ಮರೆಯಬಾರದು.

ನುಡಿದು ಜಾಣರೆನಿಕೊಳ್ಳುವುದಕ್ಕಿಂತ ನಡೆದು ಜಾಣರೆನಿಸಿಕೊಳ್ಳುವುದು ಒಳ್ಳೆಯದು. ಇದು ಪ್ರಾರಂಭದಲ್ಲಿ ಕಠಿಣವಾದರೂ ಸಾಧನೆಯಿಂದ ಸುಲಭವಾಗುತ್ತದೆ. ಇದನ್ನು ನಾವು ಮಹಾತ್ಮರ ಸಾನ್ನಿಧ್ಯದಲ್ಲಿದ್ದುಕೊಂಡೇ ಸಾಧಿಸಬೇಕು. ಇದೇ ಕಾರಣಕ್ಕಾಗಿ ಪೂರ್ವಕಾಲದಲ್ಲಿ ಮಕ್ಕಳನ್ನು ಎಳೆ ವಯಸ್ಸಿನಲ್ಲೇ ಗುರುಕುಲದಲ್ಲಿ ಮಹಾತ್ಮರ ಸಾನಿಧ್ಯದಲ್ಲಿಟ್ಟು ವಿದ್ಯಾಭ್ಯಾಸ ಮಾಡಿಸುವ ಪರಿಪಾಠ ಇತ್ತು. ಅಂಥ ಆದರ್ಶ ಮಹಾತ್ಮರ ಸಾನಿಧ್ಯದಲ್ಲಿ ಮಾತ್ರ ನಾವು ಒಳ್ಳೆಯ ಆಚಾರ–ವಿಚಾರಗಳನ್ನು ರೂಢಿಸಿಕೊಳ್ಳಲು ಸಾಧ್ಯ. ಇಲ್ಲದಿದ್ದರೆ ಪುಸ್ತಕದ ಜ್ಞಾನ ಹೃದಯಕ್ಕಿಳಿಯುವುದು ಹೇಗೆ.



## ಜ್ಞಾನ ಜ್ಯೋತಿ

▸▸ ಶ್ರೀ ಸಿದ್ಧೇಶ್ವರ ಸ್ವಾಮೀಜಿ

ಒಬ್ಬ ಮನುಷ್ಯನು ದೇಹ ಬಿಟ್ಟಿದ್ದ. ಶವ ಸಂಸ್ಕಾರಕ್ಕೆ ಅವನ ಗೆಳೆಯನು ಸ್ಮಶಾನಕ್ಕೆ ಹೋಗಿದ್ದ. ಅಲ್ಲಿ ತನ್ನ ಗೆಳೆಯನ ದೇಹವು ಅಗ್ನಿಗೆ ಆಹುತಿಯಾಗುವುದನ್ನು ಕಣ್ಣಾರೆ ಕಂಡ. ಜೀವನವು ಎಷ್ಟು ಅಸ್ಥಿರ, ನಶ್ವರ ಎನಿಸಿತು. 'ಮನುಷ್ಯನು ಈ ನಶ್ವರ ಜೀವನಕ್ಕಾಗಿ, ಸಂಸಾರಕ್ಕಾಗಿ ಆಸೆ ಪಡಬಾರದು, ಹೋರಾಡಬಾರದು!' ಎಂದು ಅಲ್ಲಿರುವವರಿಗೆ ಈತ ಹೇಳಿದ. ಜನರು ಈತನ ಉಪದೇಶಕ್ಕೆ ಮೌನವಾಗಿ ಸಮ್ಮತಿಸಿ ಮನೆಗೆ ಹೊರಟರು. ಅಷ್ಟರಲ್ಲಿ ಯಾರೋ ಈತನ ಕಾಲ ಮೇಲೆ ಕಾಲಿಟ್ಟದ್ದರಿಂದ ಇವನ ಹಳೆ ಚಪ್ಪಲಿ ಹರಿಯಿತು. 'ಕಣ್ಣು ಕಾಣುವುದಿಲ್ಲವೇ? ಹೇಗೆ ನಡೆಯುತ್ತೀರಿ?' ಎಂದು ಅವರೊಂದಿಗೆ ಈತ ವಾದವಿವಾದಕ್ಕೆ ಇಳಿದು ಹೋರಾಡತೊಡಗಿದ. ಅಲ್ಲಿದ್ದ ಜನರೆಲ್ಲ ಈತನಿಗೆ ಸಮಾಧಾನ ಹೇಳಿ ಆಗಬಹುದಾಗಿದ್ದ ಅನಾಹುತ ತಪ್ಪಿಸಿದರು. ಒಂದು ಕ್ಷಣದ ಹಿಂದೆಯೇ 'ಮಾನವ ಜೀವನ ಅಸ್ಥಿರ–ನಶ್ವರ' ಎಂದು ಹೇಳಿದವನೇ ತನ್ನ ಹಳೆಯ ಚಪ್ಪಲಿಗಳಿಗಾಗಿ ವಾದಿಸಿದ! ಇದೇ ಮಾಯೆ, ಮೋಹ!

– ಸಂಗ್ರಹ

## ಆಧಾರ್ ಜತೆ 87 ಕೋಟಿ ಬ್ಯಾಂಕ್ ಖಾತೆಗಳ ಜೋಡಣೆ




**ಹೊಸದಿಲ್ಲಿ** : ಬ್ಯಾಂಕ್‌ಖಾತೆ ಮತ್ತು ಆಧಾರ್‌ಜೋಡಣೆಗೆ ಮಾ.31 ಕಡೆಯ ದಿನವಾಗಿದ್ದು, ಈ ತನಕ 87 ಕೋಟಿ ಬ್ಯಾಂಕ್ ಖಾತೆಗಳನ್ನು ಆಧಾರ್ ಜತೆ ಲಿಂಕ್ ಮಾಡಲಾಗಿದೆ. ಈಗಾಗಲೇ 58 ಕೋಟಿ ಖಾತೆಗಳ ದೃಢೀಕರಣ ಮುಗಿದಿದೆ. ಉಳಿದ ಖಾತೆಗಳ ದೃಢೀಕರಣ ಪ್ರಕ್ರಿಯೆ ನಡೆಯುತ್ತಿದೆ.

ದೇಶದಲ್ಲಿ ಒಟ್ಟು 109 ಕೋಟಿ ಬ್ಯಾಂಕ್ ಖಾತೆಗಳಿದ್ದು ಆಧಾರ್ ಜತೆ ಶೇ.80ರಷ್ಟು ಖಾತೆಗಳ ಜೋಡಣೆ ಸಾಧ್ಯವಾಗಿದೆ. ಇತ್ತ ಮೊಬೈಲ್ ಮತ್ತು ಆಧಾರ್ ಜೋಡಣೆ ಪ್ರಕ್ರಿಯೆ ಶೇ.60ರಷ್ಟು ಪೂರ್ಣಗೊಂಡಿದೆ ಎಂದು ಯುಐಡಿಎಐ ಅಧಿಕಾರಿಗಳು ಹೇಳಿದ್ದಾರೆ.

ಅಕ್ರಮ ಸಂಪತ್ತಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಬ್ಯಾಂಕ್‌ಖಾತೆಗಳಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡುವ ನಿಯಮವನ್ನು ಸರಕಾರ ಕಡ್ಡಾಯಗೊಳಿಸಿದೆ. ಕಾಳಧನ ನಿಗ್ರಹಿಸುವ ಉದ್ದೇಶದಿಂದಲೇ ಪ್ಯಾನ್ ಮತ್ತು ಆಧಾರ್ ಜೋಡಣೆಯನ್ನೂ ಸರಕಾರ ಕಡ್ಡಾಯಗೊಳಿಸಿದೆ. ಇದಕ್ಕೂ ಮಾ.31 ಕಡೆಯ ದಿನಾಂಕ. ಜತೆಗೆ ಮೊಬೈಲ್ ಸಿಮ್‌ಕಾರ್ಡ್‌ಗಳನ್ನು ಆಧಾರ್ ಜತೆ ಜೋಡಣೆ ಮಾಡುವ ಗಡುವೂ ತಿಂಗಳಾಂತ್ಯಕ್ಕಿದೆ. 142.9 ಕೋಟಿ ಸಕ್ರಿಯ ಮೊಬೈಲ್ ಸಂಪರ್ಕಗಳಿದ್ದು, 85.7 ಕೋಟಿ ಮಂದಿ ಮಂದಿ ಈಗಾಗಲೇ ಆಧಾರ್‌ಲಿಂಕ್ ಮಾಡಿದ್ದಾರೆ. ಆಧಾರ್ ಬ್ಯಾಂಕ್ ಖಾತೆಗಳ ಜೋಡಣೆಯಿಂದ ವಂಚನೆಗಳು ಇಳಿಕೆಯಾಗಿ, ಬ್ಯಾಂಕ್‌ಮತ್ತು ಅಸಲಿ ಖಾತೆದಾರರಿಗೆ ಆಗುವ ಆರ್ಥಿಕ ನಷ್ಟ ತಪ್ಪುತ್ತದೆ ಎಂದು ಯುಐಡಿಎಐ ಸಿಇಒ ಅಜಯ್ ಭೂಷಣ್ ಪಾಂಡೆ ಹೇಳಿದ್ದಾರೆ.

ಸರಕಾರ ಮತ್ತು ಸರಕಾರೇತರ ಸಂಸ್ಥೆಗಳ ನಾನಾ ಯೋಜನೆ ಮತ್ತು ಸೇವೆಗಳಿಗೆ ಆಧಾರ್ ಅಗತ್ಯವಾಗಿದೆ. ವಾಸ ಮತ್ತು ವ್ಯಕ್ತಿಯ ದೃಢೀಕರಣದ ದಾಖಲೆಯಾಗಿ ಆಧಾರ್ ಬಳಕೆಯಾಗುತ್ತಿದೆ. ಆಧಾರ್‌ನ ಸಂವಿಧಾನಿಕ ಸಿಂಧುತ್ವ ಪ್ರಶ್ನಿಸಿದ ಅನೇಕ ಅರ್ಜಿಗಳು ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದಿವೆ.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಕಾರ್ಯನಿರ್ವಹಣೆ ಸ್ಥಳಾಂತರ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯವು ಕಾರ್ಯ ನಿರ್ವಹಿಸುತ್ತಿರುವ ಕಟ್ಟಡವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಕಟ್ಟಡ ನಿರ್ಮಾಣ ಮಾಡುವುದಕ್ಕಾಗಿ ಕೆಡವಬೇಕಾಗಿರುವುದರಿಂದ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಕಾರ್ಯನಿರ್ವಹಣೆಯನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಟ್ಟಡದ ಎದುರುಗಡೆ ಇರುವ ಕಟ್ಟಡದ **"2ನೇ ಮಹಡಿ, ನಂ. 62, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055"** ಇಲ್ಲಿಗೆ ಸ್ಥಳಾಂತರಿಸಲಾಗಿದೆ. ವಿಳಾಸ ಬದಲಾವಣೆಯನ್ನು ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

# ಏಕರೂಪದ ಜಿಎಸ್ಟಿ ಅಸಾಧ್ಯ : ಶ್ರೀ ಅರುಣ್ ಜೇಟ್ಲಿ



**ಹೊಸದಿಲ್ಲಿ :** ವ್ಯಾಪಕ ಅಸಮತೋಲನಗಳಿರುವ ಈ ದೇಶದಲ್ಲಿ ಏಕರೂಪದ ಜಿಎಸ್ಟಿ ದರ ಜಾರಿಗೆ ತರುವುದು ಅಸಾಧ್ಯ. ಆದಾಗ್ಯೂ, ತೆರಿಗೆ ವ್ಯವಸ್ಥೆಯಲ್ಲಿನ ಗೊಂದಲಗಳು ತಿಳಿಯಾದ ಬಳಿಕ, ತೆರಿಗೆದಾರರಿಗೆ ಅನುಕೂಲವಾಗುವಂಥ ಸುಧಾರಣೆಗಳನ್ನು ಸರಕಾರ ಜಾರಿಗೊಳಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿರವರು ಭರವಸೆ ನೀಡಿದ್ದಾರೆ. "ನಾವು ಎರಡು ಹಂತದ ತೆರಿಗೆ ದರಗಳನ್ನು ಹೊಂದಿದ್ದರೆ, ದೀರ್ಘ ಅವಧಿಯ ಬಳಿಕ ಅದನ್ನು ವಿಲೀನಗೊಳಿಸಬಹುದು. ಆದರೆ, ನಾನಾ ಹಂತದ ಜಿಎಸ್ಟಿ ದರಗಳನ್ನು ದೇಶ ಹೊಂದಿದೆ. ಜಿಎಸ್ಟಿಯಲ್ಲಿದ್ದ ಗೊಂದಲ, ದೋಷಗಳು ತಿಳಿಯಾಗಿ ತೆರಿಗೆದಾರರಿಗೆ ಅನುಕೂಲಗಳಾಗುತ್ತಿವೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಸುಧಾರಿಸಲಿದೆ," ಎಂದು ಅವರು ತಿಳಿಸಿದ್ದಾರೆ.

"ಸರಕಾರ ಕೈಗೊಂಡಿರುವ ಮಹತ್ವದ ಸುಧಾರಣೆಗಳು ಮತ್ತು ಪೂರಕವಾದ ಜಾಗತಿಕ ಪರಿಸರದಿಂದಾಗಿ ಮುಂದಿನ 10–20 ವರ್ಷಗಳಲ್ಲಿ ಭಾರತ ಉತ್ತಮ ಸಾಧನೆ ಮಾಡಲಿದೆ. ವಿಶ್ವದ ತ್ವರಿತ ಆರ್ಥಿಕತೆಯ ದೇಶವಾಗಿ ಭಾರತ ಹೊರಹೊಮ್ಮಲಿದೆ. ಶೇ.7–8ರ ಜಿಡಿಪಿಯನ್ನು ದೇಶದ ಪಾಲಿಗೆ ಸಹಜವಾದುದು ಎಂದು ಬಹುತೇಕರು ಭಾವಿಸಿದ್ದಾರೆ. ಆದರೆ, ಅದನ್ನೂ ಮೀರಿ ಪ್ರಗತಿ ಹೊಂದುವ ಸಾಮರ್ಥ್ಯ ಭಾರತಕ್ಕಿದೆ," ಎಂದು ಜೇಟ್ಲಿ ಅವರು ಹೇಳಿದ್ದಾರೆ.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ಪೀಠಾಧಿಕಾರಿಗಳ (ಪೂರ್ಣಾವಧಿಗೆ) ನೇಮಕ

ಸಹಕಾರಿಗಳ ಜಂಟಿ ನಿಬಂಧಕರು, ನಿಯಮ–441, ಕರ್ನಾಟಕ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಈ ಹುದ್ದೆಯನ್ನು ಸಹಕಾರಿಗಳ ಉಪ ನಿಬಂಧಕರ ಹುದ್ದೆಯ ಶ್ರೇಣಿಗೆ ನಿಮ್ನೀಕರಿಸಿ, ಶ್ರೀ ಸಿ.ಪ್ರಸಾದ್‌ರೆಡ್ಡಿ, ಸಹಕಾರಿಗಳ ಉಪ ನಿಬಂಧಕರು ಹಾಗೂ ಪ್ರಧಾನ ವ್ಯವಸ್ಥಾಪಕರು, ಜನತಾ ಬಜಾರ್, ಕೆ.ಜಿ.ರಸ್ತೆ, ಬೆಂಗಳೂರು ಇವರನ್ನು ನೇಮಿಸಲಾಗಿದೆ.



ಶ್ರೀ ಸಿ.ಪ್ರಸಾದ ರೆಡ್ಡಿ, ಸಹಕಾರಿಗಳ ಉಪನಿಬಂಧಕರು ಇವರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯದ ಪೀಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸ್ವಾಗತ ಕೋರಲಾಯಿತು.



ಶ್ರೀಮತಿ ಕೆ.ಎಂ.ಆಶಾ, ಸಹಕಾರಿಗಳ ಅಪರ ನಿಬಂಧಕರು, ನಿಬಂಧಕರ ಕಛೇರಿ ಇವರು ಸಂಯುಕ್ತ ಸಹಕಾರಿಯ ದಾವಾ ಪಂಚಾಯತ್ ನ್ಯಾಯಾಲಯದ ಪೀಠಾಧಿಕಾರಿಯಾಗಿ ಕಾರ್ಯನಿರ್ವಹಿಸಿ, ಅಪರ ನಿಬಂಧಕರಾಗಿ ಬಡ್ತಿ ಪಡೆದು ಸಹಕಾರಿಗಳ ನಿಬಂಧಕರ ಕಛೇರಿಗೆ ವರ್ಗಾವಣೆಯಾಗಿರುವ ಹಿನ್ನೆಲೆಯಲ್ಲಿ ಅವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಪರವಾಗಿ ಬೀಳ್ಕೊಡುಗೆ ಹಾಗೂ ಪದೋನ್ನತಿಗಾಗಿ ಅಭಿನಂದನೆಯನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಏರ್ಪಡಿಸಲಾಗಿತ್ತು.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ಸಹಕಾರಿಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳ ನೇಮಕ

ಶ್ರೀ ರಾಜು, ಸಹಕಾರಿಗಳ ಸಹಾಯಕ ನಿಬಂಧಕರು ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಇದರಲ್ಲಿ ಖಾಲಿ ಇರುವ ಸಹಕಾರಿಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ, ದಿನಾಂಕ 15.02.2018ರ ಮೂಲಕ ಮಾನ್ಯ ಸಹಕಾರಿಗಳ ನಿಬಂಧಕರು ಆದೇಶಿಸಿರುತ್ತಾರೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2260 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1522 ಪ್ರಕರಣಗಳು ಸೇರಿದಂತೆ ಒಟ್ಟು 3782 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2313 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 572 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 22 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 890 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 11 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಶ್ರೀಲಂಕಾದಲ್ಲಿ ಅಂತರಾಷ್ಟ್ರೀಯ ಏಷ್ಯಾ-ಫೆಸಿಫಿಕ್ ಸಮಾವೇಶ
## ಯುವಜನರೇ ಸಹಕಾರ ಕ್ಷೇತ್ರದ ಭರವಸೆ :
## ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ





**ಕೊಲಂಬೋ :** ಶ್ರೀಲಂಕಾದ ಕೊಲಂಬೋದಲ್ಲಿ ದಿನಾಂಕ 26-02-2018 ರಿಂದ 01-03-2018ರವರೆಗೆ ನಡೆದ ಅಂತರಾಷ್ಟ್ರೀಯ ಏಷ್ಯಾ-ಫೆಸಿಫಿಕ್ ಸಮಾವೇಶದಲ್ಲಿ ಬಿಲ್ಡಿಂಗ್ ಮಲ್ಟಿ ಸ್ಟೇಕ್ ಹೋಲ್ಡರ್ ಪಾರ್ಟ್‌ನರ್‌ಶಿಪ್ ಆನ್ ಸಸ್ಟೇನೇಬಲ್ ಡೆವಲಪ್‌ಮೆಂಟ್ ವಿಷಯದ ಸಮ್ಮೇಳನದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಭಾಗವಹಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅನುಮತಿಸಿತ್ತು.

ಈ ಸಹಕಾರ ಅಭಿವೃದ್ಧಿ ಸಮ್ಮೇಳನದಲ್ಲಿ 27 ರಾಷ್ಟ್ರಗಳಿಂದ 115 ಪ್ರತಿನಿಧಿಗಳು ಭಾಗವಹಿಸಿದ್ದರು. ಒಟ್ಟಾರೆ 3 ಪ್ರಮುಖ ವಿಷಯಗಳ ಕುರಿತು ಪರಿಣಾಮಕಾರಿಯಾಗಿ ಚರ್ಚೆ ನಡೆಯಿತು.

1. ಸಹಕಾರಿ ಸಂಸ್ಥೆಗಳ ಮೂಲಕ ಬಡತನ ನಿರ್ಮೂಲನೆಗಾಗಿ ಸಹಕಾರ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಆರ್ಥಿಕ ಸಬಲತೆಯನ್ನು ಪಡೆಯಲು ನೆರವಾಗುವುದು.
2. ಯುವಕರನ್ನು ಸಹಕಾರ ಕ್ಷೇತ್ರದಲ್ಲಿ ಬರಮಾಡಿಕೊಳ್ಳುವುದಕ್ಕಾಗಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.
3. ಸಹಕಾರ ಕ್ಷೇತ್ರದಲ್ಲಿ ಅವಕಾಶಗಳನ್ನು ಗುರುತಿಸಿ, ಪ್ರಚುರಗೊಳಿಸುವುದು, ಸಹಕಾರ ಕ್ಷೇತ್ರ ನನ್ನದು, ನನಗಾಗಿಯೇ ಇದು ಕಾರ್ಯನಿರ್ವಹಿಸುತ್ತಿದೆ ಎಂಬ ಭಾವನೆ ಬೆಳೆಸುವುದು.

ಈ ನಿಟ್ಟಿನಲ್ಲಿ ಉತ್ತಮ ಚರ್ಚೆಗಳು ನಡೆದು ಅನೇಕ ರಾಷ್ಟ್ರಗಳ ಸಹಕಾರಿಗಳು ಕ್ರಿಯಾಶೀಲರಾಗಿ ಭಾಗವಹಿಸಿರುವುದು ಮತ್ತು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿರುವುದು ಸ್ವಾಗತಾರ್ಹ.

### ಸಹಕಾರ ಗ್ರಾಮ ಮಾಥಸ್

ಈ ಅವಧಿಯಲ್ಲಿ ಮಾಥಸ್ ಎಂಬ ಗ್ರಾಮಕ್ಕೆ ಭೇಟಿ ನೀಡಲಾಯಿತು. ಈ ಗ್ರಾಮದಲ್ಲಿ 150 ಕುಟುಂಬಗಳಿವೆ. ಶ್ರೀಲಂಕಾ ಸಹಕಾರ ಫೆಡರೇಷನ್‌ನವರು ಈ ಗ್ರಾಮದ ಸಂಪೂರ್ಣ ಅಭಿವೃದ್ಧಿಗೆ ಹಾಗೂ ಎಲ್ಲಾ ಕುಟುಂಬದ ಆರ್ಥಿಕ ಅಭಿವೃದ್ಧಿಗೆ ಕ್ರಿಯಾ ಯೋಜನೆಯನ್ನು ಹಾಕಿಕೊಂಡು ಕಾರ್ಯನಿರ್ವಹಿಸುತ್ತಿರುವುದು ಮಾದರಿ ಹಾಗೂ ಅನುಕರಣೀಯವಾಗಿದೆ.

### ಶ್ರೀಲಂಕಾದ ಯುವ ಸಂಸತ್ (ಶ್ರೀಲಂಕಾ ಯಂಗ್ ಪಾರ್ಲಿಮೆಂಟ್)

ಶ್ರೀಲಂಕಾದಲ್ಲಿ ಸಂಸತ್ ಒಟ್ಟು ಸಂಖ್ಯೆಯ ಅರ್ಧದಷ್ಟು ಯುವಕರನ್ನು ಆಯ್ಕೆ ಮಾಡುವ ವ್ಯವಸ್ಥೆ ಇರುವುದು ಅತ್ಯಂತ ಸಂತೋಷದ ವಿಷಯ. ಇದರಿಂದ ಯುವಕರು ಆಡಳಿತದ ಹಾಗೂ ಅಭಿವೃದ್ಧಿಯ ಅನುಭವದ ಜೊತೆಗೆ ದೇಶವನ್ನು ಪ್ರಗತಿಯತ್ತ ನಡೆಸುವ ಜವಾಬ್ದಾರಿಯನ್ನು ವಹಿಸಿದಂತಾಗುತ್ತದೆ ಮತ್ತು ಪ್ರಗತಿಯ ವೇಗವು ಹೆಚ್ಚಿಸಲು ಅವಕಾಶವಾಗುತ್ತದೆ. ಈ ಮೂರು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿ, ಬಂದ ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಸಹಕಾರ ಕ್ಷೇತ್ರದಲ್ಲಿ ಹೆಚ್ಚು ಯುವಜನರನ್ನು ಬರ ಮಾಡಿಕೊಳ್ಳುವ ಕ್ರಮಗಳು ಹೆಚ್ಚಬೇಕು. ಅವರೇ ಸಹಕಾರ ಕ್ಷೇತ್ರದ ಭರವಸೆ ಆಗಿದ್ದಾರೆ ಎಂದು ತಿಳಿಸಿದರು.

### ಶ್ರೀಲಂಕಾದ ಜಾಫ್ನಾ ಭಾಗದ ಜನರಿಗೆ ಸಹಕಾರ ಕ್ಷೇತ್ರದಿಂದ ಕಾಯಕಲ್ಪ

"ಉತ್ತರ ಶ್ರೀಲಂಕಾದ ಜಾಫ್ನಾ ಏರಿಯಾದಲ್ಲಿ ಕಳೆದ 30 ವರ್ಷಗಳಿಂದ ಎಲ್‌ಟಿಟಿಇ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಹಾಗೂ ಅದರಿಂದ ತೊಂದರೆಗೀಡಾಗಿ ಸಮಾಜದ ಸಹಬಾಳ್ವೆಯಿಂದ ದೂರವಾಗಿದ್ದ ಜನರಿಗೆ ಅಂತರರಾಷ್ಟ್ರೀಯ ಕಾರ್ಮಿಕ ಅಭಿವೃದ್ಧಿ ಸಂಸ್ಥೆ (ಐಎಲ್‌ಓ) ದವರು ಶ್ರೀಲಂಕಾದಲ್ಲಿ ಸಹಕಾರ ಕ್ಷೇತ್ರದ ಮೂಲಕ ಈ ಜನರಿಗೆ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಅವಶ್ಯಕವಾದ ನೆರವನ್ನು ನೀಡುತ್ತಾ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ಸೇರಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವುದು ಸ್ವಾಗತಾರ್ಹ ಹಾಗೂ ಇದು ಸಹಕಾರ ಕ್ಷೇತ್ರದ ಸಾಧನೆ ಎನಿಸಿದೆ."




ಪಾಟ್ನಾದಲ್ಲಿ ನಡೆದ ಸಹಕಾರ ಭಾರತಿ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಭಾಗವಹಿಸಿದ್ದರು.

# ಸಾಫ್ಟ್‌ವೇರ್ ಡೆಮೋ ಕಾರ್ಯಕ್ರಮ

**ಬೆಂಗಳೂರು :** ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಅನುಕೂಲವಾಗುವಂತೆ ಸಾಮಾನ್ಯ ತಂತ್ರಾಂಶ (ಕಾಮನ್ ಸಾಫ್ಟ್‌ವೇರ್) ಒದಗಿಸುವ ಉದ್ದೇಶದಿಂದ ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ : 08.02.2018 ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಡೆಮೋ (ಪ್ರಾಯೋಗಿಕ ಪ್ರದರ್ಶನ) ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಎ.ಆರ್.ಪ್ರಸನ್ನಕುಮಾರ್, ಶ್ರೀ ಸಂಜೀವ ಮಹಾಜನ, ಶ್ರೀ ಬಿ.ಎಸ್.ಗುಂಡುರಾವ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ




ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಸೌಹಾರ್ದ ಸಹಕಾರಿಗಳಿಂದ 80 ಪ್ರತಿನಿಧಿಗಳು, ಸಾಫ್ಟ್‌ವೇರ್ ಕಂಪನಿಗಳಿಂದ 34ಕ್ಕೂ ಹೆಚ್ಚು ಪ್ರತಿನಿಧಿಗಳು, 15 ತಾಂತ್ರಿಕ ತಜ್ಞರು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಸೇರಿದಂತೆ 140ಕ್ಕೂ ಹೆಚ್ಚು ಜನರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ 17 ಸಾಫ್ಟ್‌ವೇರ್ ಕಂಪನಿಗಳು ಸಾಫ್ಟ್‌ವೇರ್ ಡೆಮೋ (ಪ್ರಾಯೋಗಿಕ ಪ್ರದರ್ಶನ) ವನ್ನು ನೀಡಿದರು.

# ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ

## ಸಹಕಾರ ಬ್ಯಾಂಕುಗಳು ಅಪ್‌ಡೇಟ್ ಆಗುವುದು ಅವಶ್ಯಕ - ಶ್ರೀ ಮನೋಹರ ಮಸ್ಕಿ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ವ್ಯಾಪ್ತಿಗೆ ಒಳಪಡುವ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಮಾನ್ಯ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿಯವರು ದಿನಾಂಕ 16-02-2018ರಂದು ನಗರದ ಹೊರವಲಯದಲ್ಲಿರುವ ಗೋಲ್ಡ್‌ಫಿಂಚ್ ರಿಟ್ರೀಟ್‌ನಲ್ಲಿ ಉದ್ಘಾಟಿಸಿ, ಮಾತನಾಡುತ್ತಾ ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳು ಉಳಿದ ಬ್ಯಾಂಕುಗಳಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ಹೇಳುತ್ತಿದ್ದಾರೆ, ಇದು ಸಂತೋಷದ ಹಾಗೂ ಹೆಮ್ಮೆಯ ವಿಷಯ. ಇದಕ್ಕೆ ಕಾರಣ ನಮ್ಮಲ್ಲಿರುವ ಆಧುನಿಕ ತಂತ್ರಜ್ಞಾನದ ಅಳವಡಿಕೆ ಮತ್ತು ಠೇವಣಿಗಳ ಸಂಗ್ರಹದಿಂದ ಹೂಡಿಕೆಯವರೆಗೆ ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸಿನ ಶಿಸ್ತು, ಗ್ರಾಹಕರಿಗೆ ಹೊಸ ಹೊಸ ಸೇವೆಗಳನ್ನು ನೀಡುವುದು, ಇತ್ಯಾದಿ ವಿಷಯಗಳಲ್ಲಿ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸಿಕೊಂಡು ಬರುತ್ತಿದ್ದೇವೆ. ಅವರ ನಿರೀಕ್ಷೆಯಂತೆ ಕಾರ್ಯನಿರ್ವಹಿಸುತ್ತಿದ್ದೇವೆ. ಅದಕ್ಕಾಗಿ ಅವರು ನಮ್ಮ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆಯ ಬಗ್ಗೆ ತೃಪ್ತಿಯಿಂದ ಇದ್ದಾರೆ. ಇದನ್ನು ಮುಂದುವರೆಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿ. ಅದಕ್ಕಾಗಿ



ನಾವು ನಿರಂತರ ಅಪ್‌ಡೇಟ್ ಆಗಿರುವುದು ಅವಶ್ಯಕ ಎಂದು ತಿಳಿಸಿದರು.

ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹಲವಾರು ಸವಾಲುಗಳಿವೆ. ಅವುಗಳಲ್ಲಿ ಪ್ರಮುಖವಾಗಿ ವ್ಯವಹಾರ ನಿರ್ವಹಣೆ, ಗ್ರಾಹಕರನ್ನು ಕಾಯ್ದುಕೊಳ್ಳುವುದು, ಆಧುನಿಕ ತಂತ್ರಜ್ಞಾನದ ಅಳವಡಿಕೆ, ವೆಚ್ಚಗಳ ನಿಯಂತ್ರಣ, ಮಾರುಕಟ್ಟೆಯಲ್ಲಿ ಪೈಪೋಟಿ ಹಾಗೂ ಸವಾಲುಗಳು, ನಿತ್ಯವೂ ಬದಲಾಗುತ್ತಿರುವ ಅರ್ಥ ವ್ಯವಸ್ಥೆಯ ನೀತಿ ನಿಯಮಗಳಿಂದಾಗಿ ಬ್ಯಾಂಕಿಂಗ್ ಕ್ಷೇತ್ರ ಪ್ರಶ್ನಾರ್ಹವಾಗಿದೆ. ಇದರ ಪಾವಿತ್ರತೆ ಚರ್ಚೆಯಾಗುತ್ತಿದೆ. ಜೊತೆಗೆ ಮಾಧ್ಯಮಗಳಿಂದ ನಕಾರಾತ್ಮಕ ಪ್ರಚಾರವಾಗಿರುವುದರಿಂದ ಈ ಕ್ಷೇತ್ರದಲ್ಲಿ ಹೊಸ ಹೊಸ ಸೌಲಭ್ಯಗಳ ಬಗ್ಗೆ ಚಿಂತನೆಯಾಗಬೇಕು. ಇದು ಒಳ್ಳೆಯ ಉದ್ಯಮವೆಂದು ನಾವೆಲ್ಲರೂ ಪರಿಗಣಿಸಬೇಕು. ನಮ್ಮ ನಮ್ಮ ಆಂತರಿಕ ಸಂಬಂಧಗಳನ್ನು ಬಲಪಡಿಸಿಕೊಳ್ಳಬೇಕು. ಇಂತಹ ತರಬೇತಿ ಕಾರ್ಯಕ್ರಮಗಳಲ್ಲಿ ತರಬೇತಿ ವಿಷಯಗಳ ಜೊತೆಗೆ ಇತರೆ ಅಭಿವೃದ್ಧಿಯ ಹಾಗೂ ತಂತ್ರಜ್ಞಾನಗಳ ವಿಷಯಗಳ ಬಗ್ಗೆಯೂ ಚರ್ಚೆಗಳು ನಡೆಯಬೇಕು ಎಂದು ತಿಳಿಸಿದರು.

## ಬ್ಯಾಂಕಿನ ಪ್ರಾಡಕ್ಟ್‌ಗಳು ಗುಣಮಟ್ಟದ್ದಾಗಿರಲಿ - ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 18 ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಖ್ಯೆಯನ್ನು ಕನಿಷ್ಠ 50ಕ್ಕೆ ಹೆಚ್ಚಿಸಲು ಎಲ್ಲಾ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಸಂಯುಕ್ತ ಸಹಕಾರಿಯ ಜೊತೆಗೆ ಸಹಕರಿಸಬೇಕು. ಪಟ್ಟಣ ಸಹಕಾರ ಬ್ಯಾಂಕುಗಳ ಪ್ರಾಡಕ್ಟ್‌ಗಳು ಗುಣಮಟ್ಟದ್ದಾಗಿರಲಿ. ತಂತ್ರಜ್ಞಾನದ ಅಳವಡಿಕೆಗಾಗಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾಮನ್ ವೇದಿಕೆಗೆ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಬಹುದಿನಗಳ ಬೇಡಿಕೆಯಾಗಿರುವ ಕಾಮನ್ ಸಾಫ್ಟ್‌ವೇರ್‌ಗೆ ಪ್ರಯತ್ನಿಸಲಾಗುತ್ತಿದೆ. ದಿನಾಂಕ 08-02-2018ರಂದು 17 ಕಂಪನಿಗಳಿಂದ ಸಾಫ್ಟ್‌ವೇರ್ ಡೆಮೋ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದ್ಯದಲ್ಲಿಯೇ ಅದು ಒಂದು ಹಂತ ತಲುಪುವ ನಿರೀಕ್ಷೆ ಇದೆ. ಸೌಹಾರ್ದ ಸಹಕಾರಿ ಕಾಯ್ದೆಯ ತೊಡಕುಗಳ ನಿವಾರಣೆಗೆ ತಿದ್ದುಪಡಿಗೆ ನಿರಂತರ ಪ್ರಯತ್ನ ನಡೆಯುತ್ತಲಿದೆ. ಸಂಯುಕ್ತ ಸಹಕಾರಿಯ ಕಟ್ಟಡದ ಕೆಲಸವೂ ಪ್ರಗತಿಯಲ್ಲಿದೆ. ಪ್ರತಿ ಜಿಲ್ಲೆಯಲ್ಲಿ ಸಂಯುಕ್ತ ಸಹಕಾರಿಯ ಸಂಪರ್ಕ ಕಛೇರಿಯನ್ನು ಪ್ರಾರಂಭಿಸಲು ಕ್ರಮವಿಡಲಾಗುತ್ತಿದೆ. ಇದರ ಜೊತೆಗೆ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ಕ್ರಮವಿಡಲಾಗುತ್ತಿದೆ ಎಂದು ತಿಳಿಸಿದ ಶ್ರೀಯುತರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ಏರ್ಪಡಿಸುವ ತರಬೇತಿ ಕಾರ್ಯಕ್ರಮಗಳಲ್ಲಿ ಎಲ್ಲಾ 18 ಪಟ್ಟಣ ಸಹಕಾರಿ ಬ್ಯಾಂಕುಗಳ ಪ್ರಾತಿನಿಧ್ಯ ಇರಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲಾ 18 ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತೀರೆಂದು ಆಶಿಸುತ್ತೇನೆ ಎಂದು ತಿಳಿದರು.

# ಸೌಹಾರ್ದ ಸಹಕಾರಿ ಬ್ಯಾಂಕುಗಳ ಆಂತರಿಕ ಸಂಬಂಧದ ಜೊತೆಗೆ ಉತ್ತಮ ಬಾಂಧವ್ಯ ಅಗತ್ಯ - ಶ್ರೀ ವಿಶ್ವನಾಥ ಚ. ಹಿರೇಮಠ

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ರಾಜ್ಯದ ಸೌಹಾರ್ದ ಸಹಕಾರಿಗಳ ಆಂತರಿಕ ಸಂಬಂಧಗಳು ಉತ್ತಮಗೊಳ್ಳಬೇಕು. ಎಲ್ಲಾ ಬ್ಯಾಂಕುಗಳು ಸಹ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಾಗಬೇಕು. ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು ಚುರುಕಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಆರ್.ಎನ್.ದೇಶಪಾಂಡೆ, ಶ್ರೀ ಆರ್.ತಿಮ್ಮಯ್ಯಶೆಟ್ಟಿ ಮುಂತಾದವರು ಭಾಗವಹಿಸಿದ್ದರು. ಪ್ರಾರಂಭದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಕೊನೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ನಂಜನಗೌಡರವರು ವಂದಿಸಿದರು.

ದಿನಾಂಕ : 16-02-2018ರಂದು ಆರ್.ಬಿ.ಐ.ನ ನಿವೃತ್ತ ಅಧಿಕಾರಿ ಶ್ರೀ ಮಹದೇವಸ್ವಾಮಿಯವರು 'ಬ್ಯಾಂಕಿಂಗ್ ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪಾತ್ರ' ಎಂಬ ವಿಷಯದ ಬಗ್ಗೆ, ಡಾ.ನಂದೀಶ ಹಿರೇಮಠರವರು 'ಬೋರ್ಡ್ ಆಫ್ ಡೈರೆಕ್ಟರ್ಸ್ ಹಾಗೂ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್' ವಿಷಯಗಳ ಬಗ್ಗೆ ಹಾಗೂ ಆರ್.ಬಿ.ಐ.ನ ಎ.ಜಿ.ಎಂ. ಆದ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣರವರು 'ಬ್ಯಾಂಕಿನ ನಿರ್ದೇಶಕರುಗಳು ಮಾಡಬಹುದಾದ ಹಾಗೂ ಮಾಡಬಾರದ ಕೆಲಸಗಳ' ಬಗ್ಗೆ ಉಪನ್ಯಾಸ ನೀಡಿದರು.

ದಿನಾಂಕ : 17-02-2018ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಇಳಂಗೋವನ್‌ರವರು 'ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಲಾಭದಾಯಕತೆ ಹಾಗೂ ವ್ಯವಹಾರ ಅಭಿವೃದ್ಧಿ ಯೋಜನೆಗಳು' ಎಂಬ ವಿಷಯದ ಬಗ್ಗೆ, ಶ್ರೀ ರಮಾನಂದರವರು 'ಡಿಜಿಟಲೈಸೇಷನ್ ಹಾಗೂ ತಂತ್ರಜ್ಞಾನ ಅಳವಡಿಕೆ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು.



## ಸಂವಾದ ಕಾರ್ಯಕ್ರಮ

ಮಧ್ಯಾಹ್ನ "ಸೌಹಾರ್ದ ಸಹಕಾರಿ ಬ್ಯಾಂಕುಗಳ ಇಂದಿನ ಸ್ಥಿತಿಗತಿ (ಸ್ಟೇಟಸ್) ಸವಾಲುಗಳು ಹಾಗೂ ಅವಕಾಶಗಳು" ಬಗ್ಗೆ ಪ್ಯಾನೆಲ್ ಡಿಸ್ಕಷನ್ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ವಹಿಸಿ, ಸೌಹಾರ್ದ ಸಹಕಾರಿ ಬ್ಯಾಂಕುಗಳ ಸ್ಥಿತಿಗತಿಗಳನ್ನು ವಿವರಿಸಿದರು. ಬ್ಯಾಂಕಿಂಗ್ ತಜ್ಞರಾದ ಶ್ರೀ ವಿಠ್ಠಲಶೆಟ್ಟಿ, ಶ್ರೀ ರಮಾನಂದ, ಶ್ರೀ ಇಳಂಗೋವನ್ ಹಾಗೂ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿ ಇವರುಗಳು ಭಾಗವಹಿಸಿ, ಪ್ರತಿನಿಧಿಗಳ ವಿವಿಧ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿದರು.



## ಸಮಾರೋಪ ಕಾರ್ಯಕ್ರಮ

ಸಮಾರೋಪ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ಮಾತನಾಡಿ ಇದೊಂದು ಉತ್ತಮವಾದ ತರಬೇತಿ ಕಾರ್ಯಕ್ರಮವಾಗಿತ್ತು. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಕ್ರಿಯವಾಗಿ ಭಾಗವಹಿಸಿ, ಇಂತಹ ಕಾರ್ಯಕ್ರಮಗಳ ಪ್ರಯೋಜನ ಪಡೆದಾಗ ಕೆಲವು ಅಭಿವೃದ್ಧಿಗೆ ಪೂರಕವಾಗುವ ಹೊಸ ಹೊಸ ವಿಚಾರಗಳು ನಮ್ಮ ಗಮನಕ್ಕೆ ಬರುತ್ತವೆ. ಇವುಗಳ ಪ್ರಯೋಜನ ಪಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ಇದೊಂದು ಉತ್ತಮ ತರಬೇತಿ ಕಾರ್ಯಕ್ರಮವಾಗಿತ್ತು. ಅನೇಕ ವಿಷಯಗಳನ್ನು ಚರ್ಚಿಸಲು ಸಾಧ್ಯವಾಗಿದೆ. ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ವರ್ಷಕ್ಕೆ ಎರಡು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. ಒಂದು ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳಿಗಾಗಿ, ಮತ್ತೊಂದು ಮುಖ್ಯಕಾರ್ಯನಿರ್ವಾಹಕರು ಮತ್ತು ಹಿರಿಯ ಅಧಿಕಾರಿಗಳಿಗಾಗಿ. ಆದ್ದರಿಂದ, ಇಂತಹ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮ ಉತ್ತಮವಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ನಂಜನಗೌಡರವರು ವಂದನೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ 13 ಸೌಹಾರ್ದ ಸಹಕಾರಿ ಬ್ಯಾಂಕುಗಳಿಂದ 39 ಪ್ರತಿನಿಧಿಗಳು ಭಾಗವಹಿಸಿದ್ದರು.



# ಸಂಯುಕ್ತ ಸಹಕಾರಿಯ ಜಿಲ್ಲಾ ಸಂಪರ್ಕ ಕಛೇರಿಗಳ ಉದ್ಘಾಟನೆ

## ಮಂಡ್ಯ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ

**ಮಂಡ್ಯ :** ದಿನಾಂಕ 06.02.2018ರಂದು ಸಂಯುಕ್ತ ಸಹಕಾರಿಯ ಮಂಡ್ಯ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ನಂ.ಡಿ5/147/1160/4ಎ, ರೂಪ್ ಮಿಲನ್ ಕ್ಲಾತ್ ಸೆಂಟರ್, ಮೊದಲನೇ ಮಹಡಿ, ಅಪೂರ್ವ ದರ್ಶಿನಿ ಎದುರು, ವಿ.ವಿ.ರಸ್ತೆ, (ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಕಟ್ಟಡ) ಮಂಡ್ಯ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಂಡ್ಯ ಜಿಲ್ಲೆಯ ನಿಕಟಪೂರ್ವ ನಿರ್ದೇಶಕರು ಹಾಗೂ ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ನಾಗರಾಜುರವರು ಉದ್ಘಾಟಿಸಿ, ಮಾತನಾಡಿದರು. ಅಧ್ಯಕ್ಷತೆಯನ್ನು ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್‌ರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದೇವರಾಜಪ್ಪ, ನಿರ್ದೇಶಕರಾದ ಶ್ರೀ ರೇವಣ್ಣರವರು ಆಗಮಿಸಿದ್ದರು.




ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣವನ್ನು ಮೈಸೂರು ವಿಭಾಗದ ಕಾನೂನು ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಮತ್ತು ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜರವರು ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ 7 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.

## ಚಾಮರಾಜನಗರ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ

**ಚಾಮರಾಜನಗರ :** ದಿನಾಂಕ 08.02.2018ರಂದು ಸಂಯುಕ್ತ ಸಹಕಾರಿಯ ಚಾಮರಾಜನಗರ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್‌ನ ಕಟ್ಟಡ, ಸಂಪಿಗೆ ರಸ್ತೆ, ತರಕಾರಿ ಮಾರುಕಟ್ಟೆ ಹತ್ತಿರ, ಚೌಡೇಶ್ವರಿ ಕಾಂಪ್ಲೆಕ್ಸ್, ಚಾಮರಾಜನಗರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಚಾಮರಾಜನಗರ ಜಿಲ್ಲೆಯ ನಿಕಟಪೂರ್ವ ನಿರ್ದೇಶಕರು ಹಾಗೂ ಶ್ರೀ ವಾಸವಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ದಿನೇಶ್ ಗುಪ್ತಾರವರು ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾ ಸಂಪರ್ಕ ಕಛೇರಿ ಪ್ರಾರಂಭವಾಗಿದ್ದು, ಮುಂದಿನ ದಿನಗಳಲ್ಲಿ ನಾವೆಲ್ಲರೂ ಈ ಕಛೇರಿಯ ಉಪಯೋಗ ಪಡೆದುಕೊಳ್ಳುವುದರ ಮೂಲಕ ನಮ್ಮ–ನಮ್ಮ ಸಂಸ್ಥೆಗಳ ಅಭಿವೃದ್ಧಿಯನ್ನು ಮಾಡಿಕೊಳ್ಳೋಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ.,ನ ಅಧ್ಯಕ್ಷರಾದ ಶ್ರೀ ಜಯಸಿಂಹರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಲಸುಬ್ರಮಣ್ಯಂ, ಶ್ರೀ ಅಕ್ಷಯ ಶ್ರೀ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೀರಭದ್ರಸ್ವಾಮಿರವರು ಆಗಮಿಸಿದ್ದರು.



ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣವನ್ನು ಮೈಸೂರು ವಿಭಾಗದ ಕಾನೂನು ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಹಾಗೂ ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜರವರು ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ 13 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.




## ಹಾಸನ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ

**ಹಾಸನ :** ದಿನಾಂಕ : 16.02.2018ರಂದು ಸಂಯುಕ್ತ ಸಹಕಾರಿಯ ಹಾಸನ ಜಿಲ್ಲಾ ಸಂಪರ್ಕ ಕಛೇರಿಯನ್ನು ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಹೊಸ ಲೈನ್ ರಸ್ತೆ, ಹಾಸನ ಇಲ್ಲಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು ಹಾಗೂ ಶ್ರೀ ಪುಷ್ಪಗಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಶಿವರುದ್ರಪ್ಪರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮೈಸೂರು ವಿಭಾಗದ ವಿಭಾಗೀಯ ಅಧಿಕಾರಿಗಳಾದ ಶ್ರೀ ವೈ.ಕುಮಾರ್, ಕಾನೂನು ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ, ಸಹನಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಮೇಶ್, ಸಾಯಿಸಿರಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶ್ಯಾಮ್‌ಸುಂದರ್‌ರವರು ಉಪಸ್ಥಿತರಿದ್ದು, ಜಿಲ್ಲಾ ಸಂಪರ್ಕ ಕಛೇರಿಯ ಅನುಕೂಲವನ್ನು ಪಡೆಯುವಂತೆ ಆಗಮಿಸಿದ್ದ ಸಹಕಾರಿಗಳಿಗೆ ತಿಳಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್ ಕೆ.ಎಂ.ರವರು ಕಾರ್ಯಕ್ರಮವನ್ನು ನಿರೂಪಿಸಿದರು, ಮಂಜುನಾಥ ಸೌಹಾರ್ದ ಸಹಕಾರಿಯ ಶ್ರೀ ಮಲ್ಲೇಶಗೌಡರವರು ವಂದಿಸಿದರು.

## ಉತ್ತರ ಕನ್ನಡ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ




ಉತ್ತರ ಕನ್ನಡ ಜಿಲ್ಲೆಯ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಪರ್ಕ ಕಛೇರಿಯನ್ನು ದಿನಾಂಕ 16.02.2018 ರಂದು ಶಿರಸಿಯಲ್ಲಿ ಉದ್ಘಾಟಿಸಲಾಯಿತು.

## ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ



**ಮಂಗಳೂರು :** ದಿನಾಂಕ : 27.02.2018ರಂದು ನೆಲ ಮಹಡಿ, ಐಡಿಬಿಐ ಬ್ಯಾಂಕ್ ಎದುರು, ಅಡೋನಿ ಟವರ್ಸ್, ಕಂಕನಾಡಿ–ಫಳ್ನೀರ್ ರಸ್ತೆ, ಮಂಗಳೂರು ಇಲ್ಲಿ ಸಂಯುಕ್ತ ಸಹಕಾರಿಯ ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಛೇರಿಯನ್ನು ಕ್ಯಾಂಪ್ಕೋದ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ಒಡಿಯೂರು ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರೈ, ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್, ಕಾನೂನು ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ, ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ಮತ್ತು ಮಂಗಳೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಜೇಶ್ ಕೆ.ಎಮ್. ಹಾಗೂ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಚಿತ್ರದುರ್ಗ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ



**ಚಿತ್ರದುರ್ಗ :** ದಿನಾಂಕ 22.02.2018ರಂದು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕಿನ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ಚಿತ್ರದುರ್ಗ ಜಿಲ್ಲಾ ಸಂಪರ್ಕ ಕಛೇರಿಯನ್ನು ಉದ್ಘಾಟಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ಮತ್ತು ಶೀಘ್ರವಾಗಿ ಕುಂದುಕೊರತೆಗಳ ನಿವಾರಣೆಗಾಗಿ ಚಿತ್ರದುರ್ಗ ಜಿಲ್ಲಾ ಸಂಪರ್ಕ ಕಛೇರಿಯನ್ನು ಪ್ರಾರಂಭಿಸಲಾಗಿದ್ದು, ಎಲ್ಲಾ ಸಹಕಾರಿಗಳು ಇದರ ಲಾಭವನ್ನು ಪಡೆದುಕೊಳ್ಳುವಂತೆ ಸಹಕಾರಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿರವರು ಮಾತನಾಡಿ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಸೌಹಾರ್ದ ಸಹಕಾರಿಗಳು ಪ್ರಾರಂಭವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಅವುಗಳ ನಿರ್ವಹಣೆಗೆ ಜಿಲ್ಲಾ ಸಂಪರ್ಕ ಕಛೇರಿಗಳು ಅವಶ್ಯಕವಾಗಿದ್ದು, ಜಿಲ್ಲಾ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಿ ಸಹಕಾರಿಗಳಿಗೆ ಅನುಕೂಲ ಮಾಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ಸಹಕಾರಿಗಳ ಉಪನಿಬಂಧಕರಾದ ಶ್ರೀ ಕೆ.ಗೋಪಾಲರೆಡ್ಡಿರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ವಿಭಾಗೀಯ ಅಧಿಕಾರಿಯಾದ ಶ್ರೀ ನಾರಾಯಣ ಹೆಗಡೆರವರು ಹಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜರವರು ನೆರವೇರಿಸಿರು. ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೀರಶೆಟ್ಟಿರವರು ನಿರೂಪಿಸಿದರು. ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ



**ದಾವಣಗೆರೆ :** ದಿನಾಂಕ : 22.02.2018ರಂದು ದಾವಣಗೆರೆ ನಗರದ ಮನಿಪ್ಲ್ಯಾಂಟ್ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿ, ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ನಂಜನಗೌಡರವರು ಮಾತನಾಡಿ ಸೌಹಾರ್ದ ಸಹಕಾರಿಗಳ ನಿರ್ವಹಣೆಗೆ ಜಿಲ್ಲಾ ಕಛೇರಿಗಳು ಅವಶ್ಯಕವಾಗಿದ್ದು, ಜಿಲ್ಲಾ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಿ, ಸಹಕಾರಿಗಳಿಗೆ ಅನುಕೂಲ ಮಾಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಉಮೇಶ ಶೆಟ್ಟಿ, ಮನಿಪ್ಲ್ಯಾಂಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ವೀರಭದ್ರಯ್ಯರವರು ಉಪಸ್ಥಿತರಿದ್ದರು.

ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆರವರು ಹಾಗೂ ವಂದನಾರ್ಪಣೆಯನ್ನು ಬೆಂಗಳೂರು ವಿಭಾಗದ ಕಾನೂನು ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ‍್ಯಾಕಲೆರವರು ನೆರವೇರಿಸಿದರು. ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವೀರಶೆಟ್ಟಿರವರು ನಿರೂಪಿಸಿದರು. ದಾವಣಗೆರೆ ಜಿಲ್ಲೆಯ 80 ಪ್ರತಿನಿಧಿಗಳು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ ಕುರಿತು ಪ್ರವರ್ತಕರ ಸಭೆ



**ಚಿತ್ರದುರ್ಗ :** ಚಿತ್ರದುರ್ಗ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ ಕುರಿತು ಪ್ರವರ್ತಕರ ಸಭೆಯು ದಿನಾಂಕ 22.02.2018ರಂದು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇಲ್ಲಿ ಜರುಗಿತು. ಈ ಸಂದರ್ಭದಲ್ಲಿ ಶ್ರೀ ಡಿ.ಆರ್.ತಿಪ್ಪೇಸ್ವಾಮಿ, ಅಧ್ಯಕ್ಷರು, ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಚಿತ್ರದುರ್ಗ ಇವರು ಮುಖ್ಯ ಪ್ರವರ್ತಕರಾಗಿ ಆಯ್ಕೆಯಾಗಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದನೆಗಳು.



**ದಾವಣಗೆರೆ :** ದಾವಣಗೆರೆ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ ಕುರಿತು ಪ್ರವರ್ತಕರ ಸಭೆಯು ದಿನಾಂಕ 22.02.2018ರಂದು ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ., ದಾವಣಗೆರೆ ಇಲ್ಲಿ ಜರುಗಿತು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ನಂಜನಗೌಡರವರು ಮುಖ್ಯ ಪ್ರವರ್ತಕರಾಗಿ ಹಾಗೂ ಇತರ 11 ಜನ ಸಹಕಾರಿಗಳು ಪ್ರವರ್ತಕರುಗಳಾಗಿ ಈ ಸಭೆಯಲ್ಲಿ ಆಯ್ಕೆಯಾಗಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದನೆಗಳು.

**ಬೆಂಗಳೂರು :** ಬೆಂಗಳೂರು ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆ ಕುರಿತು ಪ್ರವರ್ತಕರ ಸಭೆಯು ದಿನಾಂಕ 06.02.2018ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಜರುಗಿತು.

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

ತುಮಕೂರು ಸ್ವರ್ಣಾಂಬ ಪತ್ತಿನ ಸೌಹಾರ್ದ ಸಹಕಾರಿಗೆ ನೇಮಕಗೊಂಡಿದ್ದ ಸಮಾಪನಾಧಿಕಾರಿಯ ನೇಮಕವನ್ನು ಶ್ರೀ ಟಿ.ಎಸ್.ಬಸವರಾಜು ಮತ್ತು ಇತರರು, ತುಮಕೂರು ಇವರು ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಪೀಠ ಇಲ್ಲಿ W.P.No.40804/2017(CS-RES) C/W W.P No.34609/2017(CS-EL/M) ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ 15.09.2017ರಂದು ನೀಡಿರುವ ಆದೇಶದಂತೆ ತುಮಕೂರು ಸ್ವರ್ಣಾಂಬ ಪತ್ತಿನ ಸೌಹಾರ್ದ ಸಹಕಾರಿಗೆ ನೇಮಕಗೊಂಡಿರುವ ಸಮಾಪನಾಧಿಕಾರಿಯ ನೇಮಕವನ್ನು ಅನುಮೋದಿಸಿರುವ ಸಹಕಾರಿಗಳ ಸಹಾಯಕ ನಿಬಂಧಕರು, ತುಮಕೂರು ಇವರ ಆದೇಶವನ್ನು ವಜಾಗೊಳಿಸಿರುವುದರಿಂದ ಸದರಿ ಸಹಕಾರಿಗೆ ಸಮಾಪನಾಧಿಕಾರಿ ನೇಮಕಾತಿಯು ಶೂನ್ಯಗೊಳ್ಳುತ್ತದೆ.

ಈ ಹಿನ್ನೆಲೆಯಲ್ಲಿ ವಿಶೇಷಾಧಿಕಾರಿಗಳ ಅವಧಿಯು ಮುಕ್ತಾಯಗೊಂಡಿರುವುದರಿಂದ ಮತ್ತು ಸಹಕಾರಿಯಲ್ಲಿ ಖಾಲಿಯಿರುವ ಸ್ಥಾನಗಳಿಗೆ ಚುನಾವಣೆ ನಡೆಯದೇ ಇರುವುದರಿಂದ, ಸಹಕಾರಿಯ ಆಡಳಿತ ಮಂಡಲಿಯಲ್ಲಿ ಕೋರಂ ಕೊರತೆಯಾಗಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಶಶಿಕುಮಾರ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 05 ಫೆಬ್ರವರಿ 2018ರಂದು ಆದೇಶಿಸಲಾಗಿದೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

### ಕೇಂದ್ರ ಕಛೇರಿಯಿಂದ ಆಯೋಜಿಸಲು ಉದ್ಧೇಶಿಸಲಾಗಿರುವ ತರಬೇತಿಗಳು :

- ತುಮಕೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗಾಗಿ ಯುವಕರು ಮತ್ತು ಸಹಕಾರ ವಿಷಯದ ಕುರಿತು "ಸಂವಾದ" ಕಾರ್ಯಕ್ರಮವನ್ನು ಮಾರ್ಚ್ 3ನೇ ಅಥವಾ 4ನೇ ವಾರದಲ್ಲಿ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ಆಯೋಜಿಸಲು ಉದ್ಧೇಶಿಸಲಾಗಿದೆ.
- ಏಪ್ರಿಲ್ ಮಾಹೆಯಲ್ಲಿ ಸೌಹಾರ್ದ ಸಹಕಾರಿ ನಿರ್ದೇಶಕರುಗಳಿಗಾಗಿ ಎರಡು ದಿನಗಳ ತರಬೇತಿ – ಸ್ಥಳ : ಬೆಂಗಳೂರು.
- ಏಪ್ರಿಲ್ ಮಾಹೆಯಲ್ಲಿ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ ಎರಡು ದಿನಗಳ ತರಬೇತಿ – ಸ್ಥಳ : ಬೆಂಗಳೂರು.

## ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ಭೇಟಿ



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಮಾನ್ಯ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲರವರಿಂದ ಮಾನ್ಯ ಮುಖ್ಯಮಂತ್ರಿಗಳ ಭೇಟಿ.



ಕುರುಹಿನಶೆಟ್ಟಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಭೇಟಿ.



ಸಿರುಗುಪ್ಪ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿರುಗುಪ್ಪ ಸಹಕಾರಿಗೆ ಭೇಟಿ.



ವಿಶ್ವಸಿರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಿರಗುಪ್ಪ ಸಹಕಾರಿಗೆ ಭೇಟಿ.

### ದೇಣಿಗೆ



ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯಿಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುರಬಗಟ್ಟಿ ಶಾಲೆಗೆ ಪ್ರೊಜೆಕ್ಟರನ್ನು ದೇಣಿಗೆ ನೀಡಲಾಯಿತು.



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲರವರನ್ನು ಭೇಟಿ ಮಾಡಿ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ತಿದ್ದುಪಡಿ ಕುರಿತು ಮನವಿ ಸಲ್ಲಿಸಿದರು.



**ಸಿರುಗುಪ್ಪ :** ಶ್ರೀ ವಿಷ್ಣು ವಿಲಾಸ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿರುಗುಪ್ಪ ಸಹಕಾರಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿ, ಸಹಕಾರಿಯ ಬೆಳವಣಿಗೆ ಕುರಿತು ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಜೆ.ಹನುಮಂತಯ್ಯ ಮತ್ತು ನಿರ್ದೇಶಕರಾದ ಶ್ರೀ ಬಿ.ಜೆ.ಮಧುಸೂದನ್, ಶ್ರೀ ಕೆ.ಆರ್.ನಾಗರಾಜ್, ಸಂಯುಕ್ತ ಸಹಕಾರಿಯ ಕಿರಿಯ ಅಧಿಕಾರಿಯಾದ ಶ್ರೀ ಹೆಚ್.ರಾಜಶೇಖರ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅನಿಲ್ ಕುಮಾರ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್‌ಗೆ ಆರ್.ಬಿ.ಐ. ನಿಂದ ಐಎಫ್‌ಎಸ್‌ಸಿ ಕೋಡ್

ರಾಜ್ಯದ ಪ್ರತಿಷ್ಠಿತ ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಒಂದಾದ ಬಳ್ಳಾರಿ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ಮುಂದಿನ ದಿನಗಳಲ್ಲಿ ಸೆಂಟ್ರಲ್ ಪೇಮೆಂಟ್ ವ್ಯವಸ್ಥೆಯ ಒಂದು ಭಾಗವಾಗಿ ಆರ್.ಬಿ.ಐ. ನಿಂದ ಐಎಫ್‌ಎಸ್‌ಸಿ ಕೋಡ್ ಪಡೆದಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ.

ರಾಜ್ಯದ ಸಹಕಾರ ಕ್ಷೇತ್ರದಲ್ಲಿ ಉತ್ತರ ಕರ್ನಾಟಕದಲ್ಲಿ ಈ ವ್ಯವಸ್ಥೆಯನ್ನು ಪಡೆದಿರುವ ಮೊದಲನೆಯ ಸಹಕಾರಿ ಬ್ಯಾಂಕ್ ಇದಾಗಿದ್ದು, ರಾಜ್ಯ ಮಟ್ಟದಲ್ಲಿ ಎರಡನೆಯದು ಎಂದು ಎನಿಸಿಕೊಂಡಿದೆ ಎಂದು ಬ್ಯಾಂಕಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

**ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 43 (ಎ) ನಲ್ಲಿ ಸಹಕಾರಿ ಇತ್ಯರ್ಥಕ್ಕೆ ಸಲ್ಲಿಸಿರುವ ವ್ಯಾಜ್ಯ ಪ್ರಕರಣಗಳು ಹಾಗೂ ಅವುಗಳನ್ನು ಜಾರಿಗೊಳಿಸಲು ಸಲ್ಲಿಸುವ ಅರ್ಜಿಗಳಿಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಮಾನ್ಯ ಸಹಕಾರಿಗಳ ನಿಬಂಧಕರು ನೀಡಿರುವ ಸುತ್ತೋಲೆ.**

## ಕರ್ನಾಟಕ ಸರ್ಕಾರ

## ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಅಸ್ಕರ್ ರಸ್ತೆ, ಬೆಂಗಳೂರು–56.

ಸಂಖ್ಯೆ : ಆರ್‌ಸಿಎಸ್/ಎಕ್ಸ್‌ಎಂಸಿ/ದಾವಾಶುಲ್ಕ/160/2017–18 ದಿನಾಂಕ : 08–02–2018

**ವಿಷಯ :** ಕರ್ನಾಟಕ ಸೌಹಾರ್ದ 1997ರ ಪ್ರಕರಣ 43 (ಎ) ನಲ್ಲಿ ಸಹಕಾರಿ ಇತ್ಯರ್ಥಕ್ಕೆ ಸಲ್ಲಿಸಿರುವ ವ್ಯಾಜ್ಯ ಪ್ರಕರಣಗಳು ಹಾಗೂ ಅವುಗಳನ್ನು ಜಾರಿಗೊಳಿಸಲು ಸಲ್ಲಿಸುವ ಅರ್ಜಿಗಳಿಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

**ಉಲ್ಲೇಖ :** ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಡಿಎಂಸಿಡಿ–8/04/2003–04, ದಿ:03–05–2017.

## ಆದೇಶ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 43(ಎ) ರಡಿಯಲ್ಲಿ ದಾವೆಗಳನ್ನು ದಾಖಲಿಸಲು ಅವಕಾಶವಿದೆ. ಈ ರೀತಿ ದಾಖಲಿಸಲಾದ ದಾವೆಗಳಲ್ಲಿ ಪಡೆದ ಐತೀರ್ಪನ್ನು ಅನುಷ್ಠಾನಗೊಳಿಸಲು ಅಮಲ್ಜಾರಿ ಕ್ರಮಕೈಗೊಳ್ಳಲು ಸಹ ಅವಕಾಶವಿದೆ. ಅಂತಹ ದಾವಾ ಪ್ರಕರಣಗಳು ಮತ್ತು ಅಮಲ್ಜಾರಿ ಅರ್ಜಿಗಳ ಸಲ್ಲಿಕೆ ಸಂಬಂಧದಲ್ಲಿ ಶುಲ್ಕ ನಿಗದಿಗೊಳಿಸುವ ಅಧಿಕಾರ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 43ಎ ರಲ್ಲಿ ನಿಬಂಧಕರಿಗೆ ದತ್ತವಾಗಿದೆ. ಈ ಅವಕಾಶದ ಅಧಿಕಾರವನ್ನು ಉಪಯೋಗಿಸಿಕೊಂಡು ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ದಾವಾ ಶುಲ್ಕ ಮತ್ತು ಅಮಲ್ಜಾರಿ ಶುಲ್ಕವನ್ನು ಕೆಳಕಂಡಂತೆ ನಿಗದಿಪಡಿಸಿದೆ.

**ಅಧಿಬಾರ ಪ್ರಕರಣ/ ದಾವಾ ಪ್ರಕರಣ ಶುಲ್ಕ – (ಹಣಕಾಸಿನ ವ್ಯಾಜ್ಯಗಳು)**

| ಕ್ರ. ಸಂ. | ದಾವಾ ಮೊತ್ತ ಐತೀರ್ಪು ಕೋರಿರುವ ಮೊತ್ತ | ಪಾವತಿಸಬೇಕಾದ ಶುಲ್ಕ ಶೇ. (ಐತೀರ್ಪಿನ ಮೊತ್ತದ ಮೇಲೆ) |
|---|---|---|
| 1 | ರೂ.10,000–00 ರವರೆಗೂ | 9% |
| 2 | ರೂ.10,000–00 ರಿಂದ 25,000–00 | 5% |
| 3 | ರೂ.25,001–00 ರಿಂದ 50,000–00 | 3% |
| 4 | ರೂ.50,001–00 ರಿಂದ 1.00 ಲಕ್ಷದವರೆಗೂ | 2% |
| 5 | ರೂ.1.00 ಲಕ್ಷದಿಂದ 2.00 ಲಕ್ಷದವರೆಗೂ | 1.5% |
| 6 | ರೂ.2.00 ಲಕ್ಷದಿಂದ 5.00 ಲಕ್ಷದವರೆಗೂ | 1% |
| 7 | ರೂ.5.00 ಲಕ್ಷದಿಂದ ಅದಕ್ಕಿಂತ ಮೇಲ್ಪಟ್ಟು | 0.75% |

**ಹಣಕಾಸೇತರ ದಾವಾ – (ನಾನ್ ಮಾನಿಟರಿ ಡಿಸ್‌ಪ್ಯೂಟ್) [ಪ್ರಕರಣ 69. 70. 103 ಮತ್ತು 106]**

| ಕ್ರ.ಸಂ. | ಸಂಘದ ಕಾರ್ಯವ್ಯಾಪ್ತಿ | ಪಾವತಿಸಬೇಕಾದ ಶುಲ್ಕ ಪ್ರಕರಣ ರೂ. |
|---|---|---|
| 1 | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಮತ್ತು ತಾಲ್ಲೂಕು | 800–00 |
| 2 | ತಾಲ್ಲೂಕು ಮಟ್ಟಕ್ಕಿಂತ ಹೆಚ್ಚು ಜಿಲ್ಲಾ ಮಟ್ಟ ಸೇರಿ | 1000–00 |
| 3 | ಜಿಲ್ಲಾ ಮಟ್ಟಕ್ಕಿಂತ ಹೆಚ್ಚು ಪ್ರಾಂತ್ಯ ಮಟ್ಟದವರೆಗೆ | 1500–00 |
| 4 | ಪ್ರಾಂತ್ಯ ಮಟ್ಟಕ್ಕಿಂತ ಹೆಚ್ಚು ರಾಜ್ಯ ಮಟ್ಟದವರೆಗೆ | 2000–00 |

**ಅಮಲ್ಜಾರಿ ಶುಲ್ಕ**

| ಕ್ರ.ಸಂ. | ಐತೀರ್ಪು ಮೊತ್ತ | ಪಾವತಿಸಬೇಕಾದ ಶುಲ್ಕ % (ಐತೀರ್ಪಿನ ಮೊತ್ತದ ಮೇಲೆ) |
|---|---|---|
| 1 | ರೂ.25,000 ದವರೆಗೆ | 6% |
| 2 | ರೂ.25,000–ರೂ.50,000 | 5% |
| 3 | ರೂ.50,000–ರೂ.1.00 ಲಕ್ಷ | 4% |
| 4 | ರೂ.1.00 ಲಕ್ಷ–ರೂ.2.00 ಲಕ್ಷ | 3% |
| 5 | ರೂ.2.00 ಲಕ್ಷ ಮತ್ತು ಮೇಲ್ಪಟ್ಟು | 2% |

**1) ಸಾದಿಲ್ವಾರು ವೆಚ್ಚ :**

ಪ್ರತಿ ದಾವಾ ಪ್ರಕರಣದಲ್ಲಿ ರೂಪಾಯಿ 150 ಸಾದಿಲ್ವಾರು ವೆಚ್ಚವೆಂದು, ಒಬ್ಬರಿಗಿಂತ ಹೆಚ್ಚಿನ ವಾದಿ/ ಪ್ರತಿವಾದಿಗಳಿಗೆ ರೂ.50/–ರಂತೆ ಪಾವತಿಸತಕ್ಕದ್ದು. ಗೌರವ ಮಧ್ಯಸ್ಥದಾರರು ಇತ್ಯರ್ಥಪಡಿಸುವ ಪ್ರತಿ ಪ್ರಕರಣದಲ್ಲಿಯೂ ನಿಗದಿಪಡಿಸಿದ ಪಂಚಾಯ್ತಿ ದಾವಾ ಶುಲ್ಕದ ಶೇ.75ರ ಭಾಗವನ್ನು (3/4) ಪಾವತಿಸತಕ್ಕದ್ದು. ಉಳಿದ ಭಾಗವನ್ನು ಲೆಕ್ಕಶೀರ್ಷಿಕೆ: 0425-Co-Operation (ಸಹಕಾರ) ಖಾತೆಗೆ ಜಮಾ ಮಾಡತಕ್ಕದ್ದು. ಪ್ರತಿ ಪ್ರಕರಣ ಒಂದಕ್ಕೆ ಅರ್ಜಿದಾರರು ಪಾವತಿಸುವ ಸಾದಿಲ್ವಾರು ವೆಚ್ಚ ರೂಪಾಯಿ 150 ಮತ್ತು ಒಬ್ಬರಿಗಿಂತಲೂ ಹೆಚ್ಚು ಅರ್ಜಿದಾರರಿದ್ದಲ್ಲಿ ಪ್ರತಿ ಅರ್ಜಿದಾರರಿಗೆ ತಲಾ ರೂ.30/– ಅನ್ನು ಸಾದಿಲ್ವಾರು ವೆಚ್ಚವಾಗಿ ಗೌರವ ಮಧ್ಯಸ್ಥದಾರರಿಗೆ ಪಾವತಿಸತಕ್ಕದ್ದು.

ರೂ.3 ಲಕ್ಷಕ್ಕಿಂತ (ಮೂರು ಲಕ್ಷಕ್ಕಿಂತ) ಹೆಚ್ಚಿನ ಮೊತ್ತದ ದಾವೆಗಳನ್ನು ಇಲಾಖಾಧಿಕಾರಿಗಳೇ ಇತ್ಯರ್ಥಪಡಿಸುವುದು. ರೂ.3 ಲಕ್ಷಕ್ಕಿಂತ (ಮೂರು ಲಕ್ಷಕ್ಕಿಂತ) ಹೆಚ್ಚಿನ ಮೊತ್ತದ ದಾವಾ ಪ್ರಕರಣಗಳನ್ನು ಗೌರವ ಮಧ್ಯಸ್ಥದಾರರಿಗೆ ವಹಿಸತಕ್ಕದಲ್ಲ. ಸರ್ಕಾರಿ ಅಧಿಕಾರಿಗಳು ತೀರ್ಮಾನಿಸಿದ ಪ್ರಕರಣಗಳಲ್ಲಿ ಶುಲ್ಕ ಸೇರಿದಂತೆ ಸಾದಿಲ್ವಾರು ವೆಚ್ಚದ ಪೂರ್ಣ ಹಣವನ್ನು ಸರ್ಕಾರಕ್ಕೆ (ಮೇಲಿನ ಖಾತೆಗೆ) ಪಾವತಿಸತಕ್ಕದ್ದು.

**ಸಹಿ/–**
**ಸಹಕಾರ ಸಂಘಗಳ ನಿಬಂಧಕರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

### ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ :

**ದಾವಾ ಪ್ರಕರಣಗಳ ಅರ್ಜಿ ಶುಲ್ಕ ಹಾಗೂ ಜಾರಿ ಶುಲ್ಕ ಮರುಪರಿಶೀಲನೆಗೆ ಮನವಿ**

ಈ ಆದೇಶದ ಬಗ್ಗೆ ರಾಜ್ಯದ ಹಲವಾರು ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದನ್ನು ಹಾಗೂ ಇದು ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಹೊರೆಯಾಗಿ ಪರಿಣಮಿಸುವುದರಿಂದ ಈ ಆದೇಶವನ್ನು ಪುನರ್ ಪರಿಶೀಲನೆ ಮಾಡಲು ಸಂಬಂಧಿಸಿದವರನ್ನು ಕಂಡು ಪರಿಹಾರ ಒದಗಿಸಬೇಕೆಂದು ಕೋರಿದ್ದರು. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಸಹಕಾರಿಗಳ ನಿಬಂಧಕರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ. ಮಾನ್ಯ ನಿಬಂಧಕರು ಈ ಆದೇಶವನ್ನು ಪರಿಷ್ಕರಿಸುವುದಾಗಿ ಭರವಸೆ ನೀಡಿದ್ದಾರೆ.

## ಸೌಹಾರ್ದ ಸಹಕಾರಿಗಳಿಗೆ ಅವಾರ್ಡ್ ಹಾಗೂ ತೀರ್ಪು ಪೂರ್ವ ಜಪ್ತಿ ಆದೇಶವಾದ ಆಸ್ತಿಗಳನ್ನು ಪರಭಾರೆ ಮಾಡಲು ಅವಕಾಶ ನೀಡದಿರುವ ಕುರಿತು ನೋಂದಣಿ ಉಪಮಹಾಪರಿವೀಕ್ಷಕರಿಂದ ಜ್ಞಾಪನ

**ಕರ್ನಾಟಕ ಸರ್ಕಾರ**

**ನೋಂದಣಿ ಮತ್ತು ಮುದ್ರಾಂಕ ಇಲಾಖೆ**

ಸಂಖ್ಯೆ:RGN/449/17–18

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರ ಕಛೇರಿ, ಕಂದಾಯ ಭವನ, 8ನೇ ಮಹಡಿ,
ಕೆಂಪೇಗೌಡ ರಸ್ತೆ, ಬೆಂಗಳೂರು–09, ದಿನಾಂಕ:29–01–2018.

### ಜ್ಞಾಪನ

ವಿಷಯ : ಸೌಹಾರ್ದ ಸಹಕಾರಿಗಳಿಗೆ ಅವಾರ್ಡ್ ಹಾಗೂ ತೀರ್ಪು ಪೂರ್ವ ಜಪ್ತಿ ಆದೇಶವಾದ ಆಸ್ತಿಗಳನ್ನು ಪರಭಾರೆ ಮಾಡಲು ಅವಕಾಶ ನೀಡದಿರುವ ಕುರಿತು.

ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ರವರ ಪತ್ರ ಸಂಖ್ಯೆ:ಸೌ.ದಾ.ಪಂ.ನ್ಯಾ/01 2017–18/1921 ದಿನಾಂಕ:10–01–2018.

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪ್ರತಿಯನ್ನು ಈ ಕೂಡ ಲಗತ್ತಿಸಿ ಕಳುಹಿಸಲಾಗಿದೆ. ಉಲ್ಲೇಖಿತ ಪತ್ರದಲ್ಲಿ ಸಹಕಾರಿ ನಿಬಂಧಕರ ನ್ಯಾಯಾಲಯ ಹಾಗೂ ಸೌಹಾರ್ದ ಸಹಕಾರಿಗಳ ನಿಯಮ 44ರ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಅವಾರ್ಡ್ (ಆದೇಶ) ಅಥವಾ ತೀರ್ಪು ಪೂರ್ವ ಜಪ್ತಿ ಆದೇಶ ಪಡೆದಿರುವ ಆಸ್ತಿಗಳನ್ನು ಪರಭಾರೆ ಮಾಡದಂತೆ ನಿರ್ದೇಶನ ನೀಡಬೇಕಾಗಿ ಕೋರಿರುತ್ತಾರೆ. ಈ ಕುರಿತು ನಿಯಮಾನುಸಾರ ಕ್ರಮವಹಿಸುವಂತೆ ಸೂಚಿಸಿದೆ.

**ಸಹಿ/–**
**ನೋಂದಣಿ ಉಪಮಹಾಪರಿವೀಕ್ಷಕರು**
**(ಆಡಳಿತ ಮತ್ತು ಕಾನೂನು) ಬೆಂಗಳೂರು.**

**ರವರಿಗೆ,** ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳಿಗೆ, ಜಿಲ್ಲಾನೋಂದಣಾಧಿಕಾರಿಗಳ ಮುಖಾಂತರ.

**ಪ್ರತಿಯನ್ನು,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ನಿರ್ಮಾಣ ಭವನ, ಡಾ. ರಾಜ್ ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು.

**ಸೌಹಾರ್ದ ಸಹಕಾರಿಗಳ ವಿಶೇಷ ಗಮನಕ್ಕಾಗಿ :**

## ಸಂಯುಕ್ತ ಸಹಕಾರಿಗೆ ಶಾಸನಬದ್ಧವಾಗಿ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿಸಿ, ಸುಸ್ಥಿದಾರರಾಗದಂತೆ ಕ್ರಮವಿಡಲು ಮನವಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 53ರ ಪ್ರಕಾರ ರಚನೆಯಾಗಿರುವ ಶಾಸನಬದ್ಧ ಸಹಕಾರಿ ಸಂಸ್ಥೆಯಾಗಿದ್ದು, ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಯುಕ್ತ ಸಹಕಾರಿಯು ಬದ್ಧವಾಗಿದೆ. ಈ ಸಂಸ್ಥೆಯ ಕಾರ್ಯನಿರ್ವಹಣೆಗೆ ಅಗತ್ಯವಾಗುವ ಹಣಕಾಸಿನ ನಿರ್ವಹಣೆಯನ್ನು ರಾಜ್ಯದ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಪಾವತಿಸುವ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಯನ್ನು ಅವಲಂಬಿಸಿರುತ್ತದೆ. ಹೀಗಾಗಿ ಸಂಯುಕ್ತ ಸಹಕಾರಿಯು ಸದೃಢವಾಗಿ ಹಾಗೂ ಉತ್ತಮ ಗುಣಮಟ್ಟದ ಸೇವೆಯನ್ನು ಸಲ್ಲಿಸುವಂತಾಗಲು ಹಣಕಾಸಿನ ಸದೃಢತೆ ಅಗತ್ಯ.

ಸಂಯುಕ್ತ ಸಹಕಾರಿಯ ಆಡಳಿತ ನಿರ್ವಹಣೆ ಹಾಗೂ ತರಬೇತಿ ಕಾರ್ಯನಿರ್ವಹಣೆಗೆ ಅವಶ್ಯಕವಾಗುವ ಹಣಕಾಸಿನ ಸಂಪನ್ಮೂಲಗಳು ಸೌಹಾರ್ದ ಸಹಕಾರಿ ಕಾಯ್ದೆ ಕಲಂ 62 (2) (ii)ರ ಪ್ರಕಾರ ಸೌಹಾರ್ದ ಸಹಕಾರಿಗಳು ವಾರ್ಷಿಕ ಶುಲ್ಕವನ್ನು ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿ, ಒಪ್ಪಿಕೊಂಡು ಸಹಕಾರಿಗಳ ದುಡಿಯುವ ಬಂಡವಾಳದ ಆಧಾರದ ಮೇಲೆ ಪಾವತಿಸಲು ಕ್ರಮವಿಡಬೇಕಾಗುತ್ತದೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 62 (3)ರ ಪ್ರಕಾರ ಸಹಕಾರ ಶಿಕ್ಷಣ ನಿಧಿಯನ್ನು ಸಹಕಾರಿಯು ತಾವು ಗಳಿಸಿರುವ ಲಾಭದ ಆಧಾರದ ಮೇಲೆ ಶೇ.2ರಷ್ಟು ತಮ್ಮ ಸದಸ್ಯರಿಗೆ ಡಿವಿಡೆಂಡ್ ಪಾವತಿಸುವ ಮುನ್ನ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾಗುತ್ತದೆ. ಹೀಗೆ ಮಾಡದಿದ್ದರೆ ಕಾನೂನು ಉಲ್ಲಂಘನೆಯಾಗುತ್ತದೆ. ಸಂಯುಕ್ತ ಸಹಕಾರಿಯ ಸುಸ್ಥಿದಾರರಾಗುತ್ತಾರೆ (ಡಿಫಾಲ್ಟರ್) ಮತ್ತು ಸಂಯುಕ್ತ ಸಹಕಾರಿಯ ಸಂಪನ್ಮೂಲ ಕ್ರೋಢೀಕರಣದಲ್ಲಿ ಕೊರತೆಯಾಗುತ್ತದೆ.

ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಾವು ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸಿ, ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳನ್ನು ಬೆಂಬಲಿಸಿ, ಪ್ರೋತ್ಸಾಹಿಸಿ. ಇಲ್ಲಿ ತಾವು ಗಮನಿಸಬೇಕಾದ ಅತ್ಯಂತ ಮಹತ್ವದ ವಿಷಯ – ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸದಿದ್ದಲ್ಲಿ ತಮ್ಮ ಸಹಕಾರಿಯ ಹೆಸರು ಸುಸ್ಥಿದಾರರ ಪಟ್ಟಿಯಲ್ಲಿ ಬರುವುದರಿಂದ, ಪಾವತಿಸಿ ಸುಸ್ಥಿದಾರ ಪಟ್ಟಿಯಲ್ಲಿ ಬಾರದಂತೆ ಕ್ರಮವಿಡಬೇಕೆಂದು ವಿನಂತಿಸಿದೆ.

### ಸಂಯುಕ್ತ ಸಹಕಾರಿಯ ಅಧ್ಯಕ್ಷರ ವಿಶೇಷ ಮನವಿ

ಸಹಕಾರಿ ವರ್ಷ ಈ ತಿಂಗಳು ಕೊನೆಗೊಳ್ಳುವುದರಿಂದು ಪ್ರತಿಯೊಂದು ಸಹಕಾರಿಯು ತಾನು ನೀಡಿರುವ ಸಾಲಗಳನ್ನು ಸಂಪೂರ್ಣವಾಗಿ ವಸೂಲಿ ಮಾಡುವ ಹಾಗೂ ತಮ್ಮ ಸಂಸ್ಥೆಯಲ್ಲಿ ಎನ್‌ಪಿಎ ಇರದ ಹಾಗೇ ಕ್ರಮವಿಡುವುದು. ಇದರಿಂದಾಗಿ ಸಹಕಾರಿಯ ಕಾರ್ಯನಿರ್ವಹಣೆ ಆರೋಗ್ಯಕರವಾಗಿರುವಲ್ಲಿ ನೆರವಾಗುತ್ತದೆ. ಆದ್ದರಿಂದ, ಎಲ್ಲಾ ಸಹಕಾರಿಗಳು ಈ ಬಗ್ಗೆ ಕ್ರಮವಿಡಲು ಕೋರಿದೆ. ಸಂಯುಕ್ತ ಸಹಕಾರಿಯು ಸಹ ಈ ಬಾರಿ ಸೌಹಾರ್ದ ಸಹಕಾರಿಗಳು ತಾವು ಸಲ್ಲಿಸಬೇಕಾದ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ಪಡೆದುಕೊಂಡು ಸುಸ್ಥಿದಾರರೇ ಇಲ್ಲದಂತೆ ಮಾಡಲು ಪ್ರಯತ್ನಿಸುತ್ತಿದೆ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ನಿರಂತರವಾಗಿ ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ದಯವಿಟ್ಟು ಸಹಕರಿಸಿ.

**– ಬಿ.ಹೆಚ್.ಕೃಷ್ಣಾರೆಡ್ಡಿ**

# ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗದ ಜಿಲ್ಲಾ ಸಂಪರ್ಕ ಕಛೇರಿಯ ವಿವರಗಳು

| ಕ್ರ. ಸಂ. | ಜಿಲ್ಲೆ | ಜಿಲ್ಲಾ ಸಂಪರ್ಕ ಕಛೇರಿ ವಿಳಾಸ | ಉಸ್ತುವಾರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯ ಹೆಸರು ಹಾಗೂ ಮೊಬೈಲ್ ಸಂಖ್ಯೆ | ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಿಬ್ಬಂದಿ ಲಭ್ಯವಿರುವ ವಾರದ ದಿನ |
|---|---|---|---|---|
| 1 | ಶಿವಮೊಗ್ಗ | ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, 1ನೇ ಮಹಡಿ, ಆರ್‌ಟಿಒ ರಸ್ತೆ, ಶಿವಮೊಗ್ಗ–577201 | ವೀರಶೆಟ್ಟಿ ಕೆ., ಮೊ : 8884460270 | ತಿಂಗಳ ಎರಡನೇ ಮತ್ತು ನಾಲ್ಕನೇ ಬುಧವಾರ |
| 2 | ದಾವಣಗೆರೆ | ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ., # 185/2, ಮತ್ತು 5ಎ, 185ಬಿ, 1ನೇ ಮಹಡಿ, ಮುದೇಗೌಡ್ರ ಬಿಲ್ಡಿಂಗ್, ಬಾಪೂಜಿ ಬ್ಯಾಂಕ್ ಹತ್ತಿರ, ಹೆಚ್.ಎಂ.ರಸ್ತೆ, ದಾವಣಗೆರೆ–577001 | ವೀರಶೆಟ್ಟಿ ಕೆ., ಮೊ : 8884460270 | ತಿಂಗಳ ಎರಡನೇ ಮತ್ತು ನಾಲ್ಕನೇ ಶುಕ್ರವಾರ |
| 3 | ಚಿತ್ರದುರ್ಗ | ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., 2ನೇ ಮಹಡಿ, ಸಂತೇ ಪೇಟೆ, ಚಿತ್ರದುರ್ಗ– 577501 | ವೀರಶೆಟ್ಟಿ ಕೆ., ಮೊ : 8884460270 | ತಿಂಗಳ ಒಂದನೇ ಮತ್ತು ಮೂರನೇ ಮಂಗಳವಾರ |
| 4 | ಬೆಂಗಳೂರು | ಬೆಂಗಳೂರು ವಿಭಾಗೀಯ ಕಛೇರಿ, # 141, 1ನೇ ಮೈನ್, 11ನೇ ಅಡ್ಡ ರಸ್ತೆ, ಡಾ. ರಾಜಕುಮಾರ್ ರಸ್ತೆ, 1ನೇ 'ಕೆ' ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. | ಅನಿಲ್‌ಕುಮಾರ್ ಎಮ್, ಮೊ : 8884460285 | ಪ್ರತಿ ಶುಕ್ರವಾರ |
| 5 | ತುಮಕೂರು | ತುಮಕೂರು ಜಿಲ್ಲೆ | ಶಶಿಕುಮಾರ ಎಸ್, ಮೊ:8884460261 | ಪ್ರತಿ ಬುಧವಾರ |
| 6 | ಕೋಲಾರ | ಕೋಲಾರ ಜಿಲ್ಲೆ | ಶಶಿಕುಮಾರ ಎಸ್, ಮೊ:8884460261 | ತಿಂಗಳ ಮೂರನೇ ಶುಕ್ರವಾರ |
| 7 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ಜಿಲ್ಲೆ | ಶಶಿಕುಮಾರ ಎಸ್, ಮೊ:8884460261 | ತಿಂಗಳ ಮೂರನೇ ಗುರುವಾರ |
| 8 | ರಾಮನಗರ | ರಾಮನಗರ ಜಿಲ್ಲೆ | ಶಶಿಕುಮಾರ ಎಸ್, ಮೊ:8884460261 | ತಿಂಗಳ ನಾಲ್ಕನೇ ಶುಕ್ರವಾರ |
| 9 | ಬೆಂಗಳೂರು ಗ್ರಾಮಾಂತರ | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಶಶಿಕುಮಾರ ಎಸ್, ಮೊ:8884460261 | ತಿಂಗಳ ನಾಲ್ಕನೇ ಗುರುವಾರ |

## ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ವತಿಯಿಂದ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

**ನವದೆಹಲಿ :** ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ವತಿಯಿಂದ ಭಾರತದಲ್ಲಿನ ಮಹಿಳಾ ಸಹಕಾರಿಗಳ ಪದಾಧಿಕಾರಿಗಳು/ ಮಹಿಳಾ ನಿರ್ದೇಶಕರುಗಳಿಗಾಗಿ ನಾಯಕತ್ವ ಅಭಿವೃದ್ಧಿ ತರಬೇತಿಯನ್ನು ದಿನಾಂಕ 3 ರಿಂದ 5 ಏಪ್ರಿಲ್ 2018ರವರೆಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ಇಲ್ಲಿ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ 40 ಪ್ರತಿನಿಧಿಗಳಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ. ಒಂದು ಸಹಕಾರಿಯಿಂದ 2–3 ಮಹಿಳಾ ಸಹಕಾರಿಗಳ ಪದಾಧಿಕಾರಿಗಳು/ ಮಹಿಳಾ ನಿರ್ದೇಶಕರುಗಳು ಭಾಗವಹಿಸಬಹುದಾಗಿದ್ದು, ಹಿಂದಿನ 2 ವರ್ಷಗಳಿಂದ ಇಂತಹ ತರಬೇತಿಯಲ್ಲಿ ಭಾಗವಹಿಸದೇ ಇರುವ ಪ್ರತಿನಿಧಿಗಳನ್ನು ಕಳುಹಿಸಲು ವಿನಂತಿಸಿದೆ. ಹಾಗೆಯೇ, ಸಹಕಾರ ಕ್ಷೇತ್ರದಲ್ಲಿ ಪ್ರಶಂಸನಾರ್ಹ ಕಾರ್ಯಗಳನ್ನು ನಿರ್ವಹಿಸಿರುವ ಶ್ರೇಷ್ಠ ಮಹಿಳಾ ಸಹಕಾರಿಗಳನ್ನೂ ಸಹ ಈ ತರಬೇತಿಗೆ ನೋಂದಣಿ ಮಾಡಬಹುದಾಗಿರುತ್ತದೆ.

ತರಬೇತಿಗೆ ಕಳುಹಿಸಲಾಗುವ ಪ್ರತಿನಿಧಿಗಳೊಂದಿಗೆ ತಮ್ಮ ಸಹಕಾರಿ ಸಂಸ್ಥೆಯ ಸಂಕ್ಷಿಪ್ತ ಕಾರ್ಯಗಳ ವಿವರಗಳನ್ನು ಕಳುಹಿಸುವುದು. ಮೊದಲು ನೋಂದಣಿಯಾಗುವವರಿಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗುವುದು, ಹಾಗೆಯೇ, ಎಸ್‌ಸಿ/ಎಸ್‌ಟಿ/ಒಬಿಸಿ ಪ್ರತಿನಿಧಿಗಳಿಗೆ ಆದ್ಯತೆ ನೀಡಲಾಗುವುದು. ತರಬೇತಿಯಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಎನ್‌ಸಿಸಿಇ ವತಿಯಿಂದ 1) ಸ್ಲೀಪರ್ ಕ್ಲಾಸ್/ ಸಾಮಾನ್ಯ ಬಸ್ ಶುಲ್ಕವನ್ನು ತರಬೇತಿಗೆ ಬಂದು ಹೋಗುವ ಶುಲ್ಕವನ್ನು ನೀಡಲಾಗುತ್ತದೆ. (ಟಿಕೆಟ್‌ನ ಮೂಲ ಪ್ರತಿಯ ಜೆರಾಕ್ಸ್‌ನ್ನು ಸಲ್ಲಿಸಿದ ನಂತರ); 2) ತರಬೇತಿಯ ದಿನಗಳಿಗೆ ಮಾತ್ರ ಎನ್‌ಸಿಸಿಯ ಹಾಸ್ಟೆಲ್‌ನಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆ ಇರುತ್ತದೆ; 3) ತರಬೇತಿ ಮತ್ತು ತರಬೇತಿಯ ಸಾಮಾಗ್ರಿಗಳು; 4) ಅಧ್ಯಯನ ಭೇಟಿ ಈ ಸೌಲಭ್ಯಗಳನ್ನು ನೀಡಲಾಗುತ್ತದೆ.

**ಹೆಚ್ಚಿನ ಮಾಹಿತಿಗಾಗಿ :** ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, 3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಅಗಸ್ಟ್ ಕ್ರಾಂತಿ ಮಾರ್ಗ್, ನವ ದೆಹಲಿ–110016, Email : nccend@yahoo.co.in, ದೂರವಾಣಿ : 011–26681472, 26861007 ಇವರನ್ನು ಸಂಪರ್ಕಿಸುವುದು. ಸದರಿ ತರಬೇತಿಯಲ್ಲಿ ಭಾಗವಹಿಸಲು ಎನ್‌ಸಿಸಿಇ, ನವದೆಹಲಿಯಿಂದ ಖಚಿತಪಡಿಸಿದ ನಂತರ ಮಾತ್ರವೇ ದೆಹಲಿಗೆ ತೆರಳಬೇಕಾಗಿ ಈ ಮೂಲಕ ತಿಳಿಸಿದೆ.

## ಸಹಕಾರಿ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮ
## ಸಹಕಾರಿ ರಂಗಕ್ಕೆ ನಾಯಕತ್ವ ಮುಖ್ಯ - ಶ್ರೀ ಗುರುನಾಥ ಜ್ಯಾಂತಿಕರ

**ಬೀದರ :** ದಿನಾಂಕ 10-02-2018ರಂದು ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ ಇವರ ಸಹಯೋಗದೊಂದಿಗೆ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ವತಿಯಿಂದ ಆಯೋಜಿಸಲಾಗಿದ್ದ 'ಸಹಕಾರಿ ನಾಯಕತ್ವ ಅಭಿವೃದ್ಧಿ ತರಬೇತಿ' ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಶ್ರೀ ಗುರುನಾಥ ಜ್ಯಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ಹಾಗೂ ನಿರ್ದೇಶಕರು, ಕರಾಸೌಸಂಸನಿ., ಇವರು ಮಾತನಾಡಿ ಸಹಕಾರಿ ವಲಯದಲ್ಲಿ ಸಾಧನೆಗೆ ಸುಮಾರು ದಾರಿಗಳಿಗೆ. ಆದರೆ, ನಾಯಕತ್ವ ಅತಿ ಮುಖ್ಯವಾಗಿದೆ. ಅದರಲ್ಲಿ ಹಾಲಿನ ಒಕ್ಕೂಟ, ಸಣ್ಣ ಹಾಗೂ ದೊಡ್ಡ ಸಂಸ್ಥೆ, ಹೈನುಗಾರಿಕೆ ಸಂಸ್ಥೆ, ಮಹಿಳಾ ಸಂಸ್ಥೆ, ಕೈಗಾರಿಕಾ ಸಂಸ್ಥೆ ಇತ್ಯಾದಿ ಸಂಸ್ಥೆಗಳು ಸೇರಿದಂತೆ ಇನ್ನೂ ಹೆಚ್ಚು ಹೆಚ್ಚು ಸಂಸ್ಥೆಗಳನ್ನು ಹುಟ್ಟು ಹಾಕಲು ಯುವಕರು ಮುಂದೆ ಬರಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ಸಲಿಮೋದ್ದಿನ್, ಅಧ್ಯಕ್ಷರು, ಬೀದರ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್, ಶ್ರೀಮತಿ ಶಕುಂತಲಾ ಬೆಲ್ದಾಳೆ, ಕರ್ನಾಟಕ ರಾಜ್ಯ ಮಹಿಳಾ ಮಹಾಮಂಡಳ, ಬೆಂಗಳೂರು ಮತ್ತು ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ವೀರಭದ್ರಪ್ಪ ಬುಯ್ಯಾ, ಜಿಲ್ಲಾಧ್ಯಕ್ಷರು, ಸಹಕಾರ ಭಾರತಿ, ಬೀದರ ಇವರು ಕಾರ್ಯಕ್ರಮವನ್ನುದ್ದೇಶಿಸಿ, ಮಾತನಾಡಿದರು.

ತರಬೇತಿಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಾಜಶೇಖರ ನಾಗಮೂರ್ತಿ ಇವರು ಆಡಳಿತ ಮಂಡಲಿಯ ಜವಾಬ್ದಾರಿ ಮತ್ತು ಕರ್ತವ್ಯಗಳ



ಕುರಿತು ಹಾಗೂ ಶ್ರೀ ಜಗನ್ನಾಥ ಕರಂಜೆ, ಅಧ್ಯಕ್ಷರು, ದುರ್ಗಾಮಾತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇವರು ನಾಯಕತ್ವದ ಗುಣಲಕ್ಷಣಗಳ ಬಗ್ಗೆ ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಉಮೇಶ ಮೂಲಿಮನಿ ಇವರು ಸಹಕಾರ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳ ಆದಾಯ ತೆರಿಗೆ ಮತ್ತು ವಿವಿಧ ಕಾನೂನುಗಳ ಕುರಿತು ಹಾಗೂ ಶ್ರೀ ನಾಗೇಶ್ವರ ರೆಡ್ಡಿ ಇವರು ಸಹಕಾರಿ ಸಂಸ್ಥೆಯಲ್ಲಿ ಬಳಸುವ ತಂತ್ರಾಂಶದ (ಸಾಫ್ಟ್‌ವೇರ್) ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ನಿರ್ವಹಣೆಯನ್ನು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕರಾದ ಶ್ರೀ ಬಸವರಾಜ ಬುಧೇರಾ, ಶ್ರೀ ನಂದಾವಿವೇಕಾನಂದ ಮತ್ತು ಶ್ರೀ ಕ್ರಾಂತಿಕುಮಾರ ಕುಲಾಲ, ಶ್ರೀ ಮಹೇಶ್ವರ ಸ್ವಾಮಿ, ಶ್ರೀ ಶ್ರೀಕಾಂತ ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿಯ ಶಾಖೆ ಸ್ಥಳಾಂತರ



**ಸಿರುಗುಪ್ಪ :** ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಸಹಕಾರಿಯ 2008ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಬಸ್ ನಿಲ್ದಾಣದ ಹತ್ತಿರದ ಪಿಚ್ಚೇಶ್ವರ ಕಾಂಪ್ಲೆಕ್ಸ್‌ನಲ್ಲಿ ಪ್ರಾರಂಭಿಸಲಾಗಿದ್ದ ಶಾಖೆಯನ್ನು ಮಂಜುನಾಥ ಟ್ರೇಡ್ ಕಾಂಪ್ಲೆಕ್ಸ್ (ಮುಳ್ಳೂರು ಕಾಂಪ್ಲೆಕ್ಸ್)ಗೆ ಸ್ಥಳಾಂತರಿಸುವ ಸಮಾರಂಭವನ್ನು ಶ್ರೀ ಅಭಯಾಂಜನೇಯ ದೇವಸ್ಥಾನದಲ್ಲಿ ದಿನಾಂಕ 09.02.2018ರಂದು ಹಮ್ಮಿಕೊಳ್ಳಲಾಗಿತ್ತು.

ಈ ಸಮಾರಂಭವನ್ನು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಟಿ.ಎಮ್.ಚಂದ್ರಶೇಖರಯ್ಯ ಸ್ವಾಮಿರವರು ಉದ್ಘಾಟಿಸಿ, ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿರುಗುಪ್ಪ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಚೊಕ್ಕಬಸನಗೌಡರವರು ಮಾತನಾಡಿದರು. ಮತ್ತೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸೌಹಾರ್ದ ಸಹಕಾರಿ ಸಂಸ್ಥೆಗಳು ರಾಜ್ಯದಲ್ಲಿ ಹಣಕಾಸಿನ ವ್ಯವಹಾರದ ಜೊತೆಗೆ ಸಾಮಾಜಿಕ ಜವಾಬ್ದಾರಿ ಮತ್ತು ಕಳಕಳಿಯನ್ನು ಹೊಂದಿವೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ, ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿಯು ಕೂಡ ತನ್ನ ಪೂರಕ ಸಂಸ್ಥೆಯಾದ ಶ್ರೀ ಭ್ರಮರಾಂಬ ಚಾರಿಟೇಬಲ್ ಟ್ರಸ್ಟ್ ಮೂಲಕ ವೈಕುಂಠ ರಥ (ಶವ ಸಾಗಣೆ ವಾಹನ)ವನ್ನು ಮಸ್ಕಿ ಜನರಿಗೆ ದೇಣಿಗೆ ನೀಡಿ, ಉತ್ತಮ ಕಾರ್ಯ ಮಾಡಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಸಮಾರಂಭದ ಸಾನಿಧ್ಯವನ್ನು ಪೂಜ್ಯ ಶ್ರೀ ಬಸವಭೂಷಣ ಸ್ವಾಮಿಗಳು, ಬಸವ ಬಳಗ, ಸಿರುಗುಪ್ಪ ಅವರು ವಹಿಸಿಕೊಂಡಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಡಾ.ಶಿವಶರಣಪ್ಪ ಇತ್ಲಿ ಅವರು ವಹಿಸಿಕೊಂಡಿದ್ದರು. ಸಿರುಗುಪ್ಪ ಶಾಖೆಯ ಮುಖ್ಯ ಸಂಯೋಜಕರಾದ ಶ್ರೀ ಎಮ್.ಶಿವಶಂಕರಗೌಡ, ಶ್ರೀ ನಾಗನಗೌಡ.ಕೆ., ಚಾರ್ಟೆಡ್ ಅಕೌಂಟೆಂಟ್, ಸಿರುಗುಪ್ಪ, ಶ್ರೀ ಬಸವರಾಜಪ್ಪ ಶರಣರು, ಬಸವ ಬಳಗ, ಶ್ರೀ ಪಾಲಾಕ್ಷರೆಡ್ಡಿ, ಮಾಜಿ ಅಧ್ಯಕ್ಷರು, ಪಿಕಾರ್ಡ್ ಬ್ಯಾಂಕ್, ಸಿರುಗುಪ್ಪ, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಪಂಪಣ್ಣ ಗುಂಡಳ್ಳಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಸಿರುಗುಪ್ಪ ಶಾಖೆಯ ಸಲಹಾ ಸಮಿತಿ ಸದಸ್ಯರು ಮತ್ತು ಸಹಕಾರಿಯ ಸದಸ್ಯರು ಪಾಲ್ಗೊಂಡಿದ್ದರು. ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಹಕಾರಿಯ ಸೇವೆ ಮತ್ತು ಹಣಕಾಸಿನ ವಿವರಗಳ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ನೀಡಿದರು. ಸಮಾರಂಭದ ನಿರೂಪಣೆಯನ್ನು ಶಾಖಾ ವ್ಯವಸ್ಥಾಪಕರಾದ ಶ್ರೀ ಬಸವರಾಜ ಶಾಸ್ತ್ರಿ ನಡೆಸಿಕೊಟ್ಟರು.

# ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಶಾಖೆಗಳ ಉದ್ಘಾಟನೆ

**ಚಿಕ್ಕೋಡಿ ಶಾಖೆ :** ದಿನಾಂಕ : 16.01.2018ರಂದು ಸಹಕಾರಿಯ 7ನೇ ಹಾಗೂ (ಚಿಕ್ಕೋಡಿ ಪಟ್ಟಣದ 2ನೇ ಶಾಖೆ ಇ-ಸ್ಟ್ಯಾಂಪಿಂಗ್ ಕೇಂದ್ರದ) ಚಿಕ್ಕೋಡಿ ಪಟ್ಟಣದ ಚರಮೂರ್ತಿ ಮಠ ನಿವೇಶನದಲ್ಲಿ ಶ್ರೀ ಮ.ನಿ.ಪ್ರ.ಸ. ಸಂಪಾದನಾ ಮಹಾಸ್ವಾಮಿಗಳು, ಚಿಕ್ಕೋಡಿ ಇವರ ದಿವ್ಯ ಸಾನಿಧ್ಯದಲ್ಲಿ ಬೆಳಗಾವಿಯ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶಣ್ಣಾ ಎಮ್. ಕವಟಗಿಮಠರವರು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಚಿಕ್ಕೋಡಿ ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಶ್ರೀ ಕಲ್ಮೇಶ ತುಕಾರಾಮ ಕಿವಡ ಮತ್ತು ಬಸವಜ್ಯೋತಿ ಯೂಥ್ ಫೌಂಡೇಶನ್ ಅಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ಹಾಗೂ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಕರಾಸೌಸಂಸನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಂ. ಕವಟಗಿಮಠ ಹಾಗೂ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿರವರು ಉಪಸ್ಥಿತರಿದ್ದರು.





**ಖಾನಾಪೂರ ಶಾಖೆ :** ದಿನಾಂಕ : 19.01.2018ರಂದು ಸಹಕಾರಿಯ 8ನೇ ಶಾಖೆಯನ್ನು ಖಾನಾಪೂರ ಪಟ್ಟಣದ ಡಿ.ಎನ್.ಪಾಟೀಲ ಬಿಲ್ಡಿಂಗ್‌ನಲ್ಲಿ ಶ್ರೀ ಷ. ಬ್ರ. ಶಂಭುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಶ್ರೀ ಸಿದ್ದಶಿವಯೋಗಿ ಶಾಂಡಿಲೇಶ್ವರ ಮಠ ಪುಣ್ಯಕ್ಷೇತ್ರ, ಹಿರೇಮುನವಳ್ಳಿ ಶಾಖಾ ಮಠ ಪಾರಿಶ್ವಾಡರವರು ಉದ್ಘಾಟಿಸಿದರು. ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಕರಾಸೌಸಂಸನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಂ. ಕವಟಗಿಮಠ ಹಾಗೂ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ, ಪಟ್ಟಣ ಪಂಚಾಯತಿ ಸದಸ್ಯರಾದ ಶ್ರೀ ಅಪ್ಪಯ್ಯಾ ಕುಡೊಳ್ಳಿ ಹಾಗೂ ಗಣ್ಯ ವ್ಯಾಪಾರಸ್ಥರಾದ ಶ್ರೀ ಅಭಿಷೇಕ ಹೊಸಮನಿ ಮತ್ತು ಕಿರಣ ಕುಡೊಳ್ಳಿರವರು ಉಪಸ್ಥಿತರಿದ್ದರು.



**ಮುನವಳ್ಳಿ ಶಾಖೆ :** ದಿನಾಂಕ 20.01.2018ರಂದು ಸಹಕಾರಿಯ 9ನೇ ಶಾಖೆಯನ್ನು ಶ್ರೀ ಮ.ನಿ.ಪ್ರ. ಮುರಘೇಂದ್ರ ಮಹಾಸ್ವಾಮಿಗಳು, ಮುನವಳ್ಳಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಚಂದ್ರಶೇಖರಯ್ಯಾ ರುದ್ರಯ್ಯಾ ವಿರಕ್ತಮಠ ಹಾಗೂ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಕರಾಸೌಸಂಸನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಂ. ಕವಟಗಿಮಠ ಹಾಗೂ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿರವರ ಉಪಸ್ಥಿತಿಯಲ್ಲಿ ಜರುಗಿತು. ಈ ಸಂದರ್ಭದಲ್ಲಿ ಪಟ್ಟಣದ ಗಣ್ಯ ವ್ಯಾಪಾರಸ್ಥರಾದ ಶ್ರೀ ಭೀಮರಾಯಪ್ಪಾ ಯಲಿಗಾರ, ಮುಖಂಡರಾದ ಶ್ರೀ ಉಮೇಶ ಬಾಳಿ ಮತ್ತು ಶ್ರೀ ಸಂಗಪ್ಪಾ ಬಟಕುರ್ಕಿ, ಚಂದು ಹೋಳಿಮಠ ಇವರುಗಳು ಉಪಸ್ಥಿತರಿದ್ದರು.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ ಆಪರೇಟಿವ್ ಲಿ., ಕೋಲಾರ ಸಹಕಾರಿಯ 28ನೇ ಶಾಖೆಯನ್ನು ಕೆಂಗೇರಿಯಲ್ಲಿ ಸ್ಥಳೀಯ ಕಾರ್ಪೋರೇಟ್ ಆದ ಶ್ರೀ ವಿ.ವಿ. ಸತ್ಯನಾರಾಯಣರವರಿಂದ ಉದ್ಘಾಟನೆ.

**ಹುಬ್ಬಳ್ಳಿ ಶಾಖೆ :** ದಿನಾಂಕ : 24.01.2018ರಂದು ಸಹಕಾರಿಯ 10ನೇ ಶಾಖೆಯನ್ನು ಹುಬ್ಬಳಿ ಮಹಾನಗರದಲ್ಲಿ ನ್ಯೂ ಕಾಟನ್ ಮಾರ್ಕೆಟ್‌ನಲ್ಲಿ ಶ್ರೀ ವೀರಣಗೌಡಾ ಬಿ. ಪಾಟೀಲ, ಮಾಲೀಕರು, ಬಿ ಡಿ ಪಾಟೀಲ & ಕಂ., ಹುಬ್ಬಳ್ಳಿ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಶಂಕ್ರಣ್ಣಾ ಮುನವಳ್ಳಿ, ನಿರ್ದೇಶಕರು, ಕೆ.ಎಲ್.ಇ. ಸಂಸ್ಥೆ, ಬೆಳಗಾವಿ, ಶ್ರೀ ಮಹೇಂದ್ರ ಸಿಂಘಿ, ಸಂಸ್ಥಾಪಕ ಅಧ್ಯಕ್ಷರು, ಸಂಸ್ಕಾರ ಆಂಗ್ಲ ಮಾಧ್ಯಮ ಶಾಲೆ, ಹುಬ್ಬಳ್ಳಿ, ಶ್ರೀ ಕಾಡಯ್ಯಾ ಜಿ. ಹಿರೇಮಠ, ಮಾಜಿ ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಧಾರವಾಡ, ಶ್ರೀ ಜಿ.ಎಮ್.ಚಿಕ್ಕಮಠ, ಗಣ್ಯ ವ್ಯಾಪಾರಸ್ಥರು, ಹುಬ್ಬಳ್ಳಿ ಹಾಗೂ ಶ್ರೀ ಚಂದ್ರಕಾಂತ ಪಡಚಣ್ಣವರ, ನಿರ್ದೇಶಕರು, ಕರಾಸೌಸಂಸನಿ., ಬೆಂಗಳೂರು ಮತ್ತು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ಕರಾಸೌಸಂಸನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಜಗದೀಶ ಎಂ. ಕವಟಗಿಮಠ ಹಾಗೂ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿರವರು ಉಪಸ್ಥಿತರಿದ್ದರು.

ಮೇಲಿನ 4 ಶಾಖೆಗಳ ಉದ್ಘಾಟನಾ ಸಮಾರಂಭದಲ್ಲಿ ಸಹಕಾರಿಯ ನಿರ್ದೇಶಕರುಗಳು, ಸದಸ್ಯರು, ಠೇವುದಾರರು ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಮ್.ಬಿ.ಬಡಿಗೇರ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.





ಸುಂದರಾ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾಗಲಕೋಟ ಸಹಕಾರಿಯ ದ್ವಿತೀಯ ಶಾಖೆಯು ದಿನಾಂಕ 18.02.2018ರಂದು ಮುಧೋಳದಲ್ಲಿ ಉದ್ಘಾಟನೆ.



ಸಮುದ್ರ ಸೌಹಾರ್ದ ಸಹಕಾರಿ ನಿ., ಕಾರಟಗಿ ಸಹಕಾರಿಯ ಉದ್ಘಾಟನೆ



## ಗ್ರಾಹಕರ ದಿನಾಚರಣೆ

**ಸಂತೆಕಟ್ಟೆ** : ಬೆಳ್ತಂಗಡಿ ಪ್ರೇರಣಾ ಸೌಹಾರ್ದ ಸಹಕಾರಿ ನಿ., ಸಂತೆಕಟ್ಟೆ ಸಹಕಾರಿಯು ಒಂದು ವರ್ಷ ಪೂರ್ಣಗೊಂಡ ಪ್ರಯುಕ್ತ ದಿನಾಂಕ 17.02.2018 ರಂದು "ಗ್ರಾಹಕರ ದಿನಾಚರಣೆ"ಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಲ್ಯಾನ್ಸಿ ಎ.ಪಿರೇರಾರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ 53ಕ್ಕೂ ಹೆಚ್ಚು ಮಂದಿ ಉಪಸ್ಥಿತರಿದ್ದರು.

## ಎಟಿಎಂ ಕಮ್ ರೂಪೇ ಡೆಬಿಟ್ ಕಾರ್ಡ್ ವಿತರಣೆ

**ಸಂಡೂರು** : ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸಂಡೂರು (ಎಸ್‌ಪಿಎಸ್ ಬ್ಯಾಂಕು) ವತಿಯಿಂದ ದಿನಾಂಕ 26.01.2018ರ 69ನೇ ಗಣರಾಜ್ಯೋತ್ಸವ ದಿನದಂದು ಬ್ಯಾಂಕಿನ ಗ್ರಾಹಕರ ಅನುಕೂಲಕ್ಕಾಗಿ ಬ್ಯಾಂಕಿನ ಎಟಿಎಂ ಕಮ್ ರೂಪೇ ಡೆಬಿಟ್ ಕಾರ್ಡ್ ಸೌಲಭ್ಯವನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎಸ್.ನಾಗರಾಜರವರು ಸಾಂಕೇತಿಕವಾಗಿ ಉದ್ಘಾಟಿಸುವುದರೊಂದಿಗೆ ರೂಪೇ ಕಾರ್ಡನ್ನು ಬ್ಯಾಂಕಿನ ಕೆಲವು ಗ್ರಾಹಕರಿಗೆ ವಿತರಿಸಿದರು.

ಪ್ರಸ್ತುತ ಕೋರ್ ಬ್ಯಾಂಕಿಂಗ್ ಸೇವೆ ಅಡಿಯಲ್ಲಿ ಇರುವ ಆರ್.ಟಿ.ಜಿ.ಎಸ್/ ನೆಫ್ಟ್, ಸಬ್ಸಿಡಿ, ಎಸ್‌ಎಂಎಸ್, ಸಿಟಿಎಸ್ ಚೆಕ್‌ಗಳ ವ್ಯವಸ್ಥೆಯ ಜೊತೆಗೆ ಎ.ಟಿ.ಎಂ. ಮೊಬೈಲ್ ಬ್ಯಾಂಕಿಂಗ್ ಹಾಗೂ ನೆಟ್ ಬ್ಯಾಂಕಿಂಗ್ ಸೇವೆಯ



ವ್ಯವಸ್ಥೆಯು ಬ್ಯಾಂಕಿನ ಗ್ರಾಹಕರಿಗೆ ಸಿಗಲಿದೆ ಹಾಗೂ ಈ ವ್ಯವಸ್ಥೆಗೆ ಸಹಕರಿಸಿದ ಎನ್‌ಪಿಸಿಐ, ಐಡಿಬಿಐ ಬ್ಯಾಂಕ್, ವಿಸಾಪ್ಟ್ ಹಾಗೂ ಸರ್ವತ್ರ ಕಂಪನಿಯವರಿಗೆ ವಂದನೆಗಳನ್ನು ತಿಳಿಸಿದರು.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ವತಿಯಿಂದ ಹೇಮಾವತಿ ಹೆಂಜೇರು ಸಿದ್ಧೇಶ್ವರ ಸ್ವಾಮಿ ಜಾತ್ರೆಯ ಸಂದರ್ಭದಲ್ಲಿ ಅನ್ನ ದಾಸೋಹ.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ಸಿಬ್ಬಂದಿಗಳಿಗಾಗಿ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

# ಸೌಹಾರ್ದ ಸಹಕಾರಿ ಕಾಯ್ದೆ 1997 - ಸಹಕಾರಿಗಳ ಲೆಕ್ಕಪತ್ರಗಳ ಪರಿಶೋಧನೆ

▸▸ ಜಿ.ಎಸ್. ಟೋಪಣ್ಣವರ, ಲೆಕ್ಕಪರಿಶೋಧನಾ ವರದಿಗಳ ಪರಿಶೀಲನೆ ಹಾಗೂ ಪರಿವೀಕ್ಷಣಾ ಅಧಿಕಾರಿ, ಬೆಳಗಾವಿ ವಿಭಾಗ.

ಸಾರ್ವಜನಿಕರಿಂದ ಸಾಮೂಹಿಕವಾಗಿ ಬಂಡವಾಳ, ನಿಧಿಗಳನ್ನು ಸಂಗ್ರಹಿಸಿ ಅವುಗಳ ಮೂಲಕ ವ್ಯವಹರಿಸುವ ಯಾವುದೇ ಸಂಸ್ಥೆಯು ತಾನು ಸಂಗ್ರಹಿಸಿದ ಬಂಡವಾಳ ಹಾಗೂ ನಿಧಿಗಳನ್ನು ಅದರ ವಿನಿಯೋಗದ ನೀತಿ, ರೀತಿ ಹಾಗೂ ಪದ್ಧತಿಗಳು ಅದರಿಂದ ಪಡೆದ ಲಾಭ, ಅನುಭವಿಸಿದ ನಷ್ಟ, ಅದು ಹೊಂದಿದ ಆಸ್ತಿ-ಪಾಸ್ತಿಗಳು ಹಾಗೂ ಜವಾಬ್ದಾರಿಗಳು ಇವುಗಳ ಮಾಹಿತಿಗಳನ್ನು, ವಿವರಗಳನ್ನು ಕಾಲಕಾಲಕ್ಕೆ ಪಾರದರ್ಶಕವಾಗಿ ಸಾರ್ವಜನಿಕರಿಗೆ ಒದಗಿಸುವುದು ಅದರ ಕರ್ತವ್ಯವಾಗಿದೆ. ಇದಕ್ಕೆ ಕರ್ನಾಟಕ ಸೌಹಾರ್ದ ಸಹಕಾರಿ ಕಾನೂನು, 1997ರಲ್ಲಿ ನೋಂದಣಿಗೊಂಡ ಸಹಕಾರಿ ಸಂಸ್ಥೆಗಳು ಹೊರತಾಗಿಲ್ಲ. ಇವುಗಳು ಸಮಾನ ಮನಸ್ಕದ ಹಾಗೂ ವಿಚಾರಗಳ ಉದ್ದೇಶಗಳನ್ನು ಹೊಂದಿದ ಸದಸ್ಯರು ಅವರ ಆರ್ಥಿಕ ಚಟುವಟಿಕೆಗಳಿಗೆ ಸ್ಪಂದಿಸಲು ಹಾಗೂ ಅವುಗಳ ಬೆಳವಣಿಗೆ ಆರ್ಥಿಕ ಸಹಾಯ ಒದಗಿಸಲು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸದಸ್ಯರಿಂದಲೇ ಸ್ಥಾಪಿತಗೊಂಡ ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ಪದ್ಧತಿಯಲ್ಲಿ ಸದಸ್ಯರಿಂದಲೇ ಆಡಳಿತ ನಿರ್ವಹಿಸಲ್ಪಡುವ ಸೌಹಾರ್ದ ಸಹಕಾರಿ ಸಂಸ್ಥೆಗಳಾಗಿರುತ್ತವೆ.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಂಡಿಕೆ 33ರಡಿ ಪ್ರತಿಯೊಂದು ಸಹಕಾರಿಯು ಕನಿಷ್ಠ ವರ್ಷಕ್ಕೊಮ್ಮೆಯಾದರೂ ತನ್ನ ಲೆಕ್ಕಪತ್ರಗಳನ್ನು ಪ್ರತಿ ಸಹಕಾರಿ ವರ್ಷದ ಮುಕ್ತಾಯದ ನಂತರ ಮುಂಬರುವ ಸೆಪ್ಟೆಂಬರ್ ತಿಂಗಳ ಒಂದರೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧಿಸುವ ಸಂಸ್ಥೆಗಳ ಪಟ್ಟಿಯಲ್ಲಿರುವ ಹಾಗೂ ಸದರಿ ಸಹಕಾರಿಯ ಸಾಮಾನ್ಯ ನಿಕಾಯದಿಂದ ನೇಮಕವಾದ ಲೆಕ್ಕಪರಿಶೋಧಕರಿಂದ ಅಥವಾ ಲೆಕ್ಕಪರಿಶೋಧಿಸುವ ಸಂಸ್ಥೆಯಿಂದ ಪರಿಶೋಧನೆಯನ್ನು ಕಡ್ಡಾಯವಾಗಿ ಮಾಡಿಸುವುದು ಆಡಳಿತ ಮಂಡಲಿಯ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಯಾಗಿರುತ್ತದೆ. ಪ್ರತಿ ವರ್ಷ ಆಯಾ ಸಹಕಾರಿ ವರ್ಷ ಕೊನೆಗೊಂಡ ತಕ್ಷಣ ಏಪ್ರಿಲ್ 30ರ ಒಳಗೆ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಸಹಕಾರಿಯ ಕೊನೆಗೊಂಡ ಆರ್ಥಿಕ ವರ್ಷದ ಜಮಾ-ಖರ್ಚು ತಃಖ್ತೆಗಳು, ಆದಾಯ-ವ್ಯಯ ತಃಖ್ತೆಗಳು, ಲಾಭ ಸಹಿತ ಆಸ್ತಿ-ಹೊಣೆ ಪಟ್ಟಿ, ವಾರ್ಷಿಕ ಆರ್ಥಿಕ ತಃಖ್ತೆಗಳನ್ನು ತಯಾರಿಸಿ ಆಡಳಿತ ಮಂಡಲಿಯ ಮುಂದೆ ಅವುಗಳನ್ನು ಮಂಡಿಸಿ, ನಂತರ ಕೂಡಲೇ ಎಲ್ಲಾ ಮಾಹಿತಿಗಳನ್ನು ಲೆಕ್ಕಪರಿಶೋಧಕನಿಗೆ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಲೆಕ್ಕಪರಿಶೋಧನೆಗಾಗಿ ಒದಗಿಸಬೇಕು. ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧನಾ ಸಂಸ್ಥೆಗೆ ಒದಗಿಸಬೇಕಾದ ಷೆಡ್ಯೂಲ್‌ಗಳು ಮತ್ತು ರಿಟರ್ನ್‌ಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ.

1. ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ;
2. ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯ ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ;
3. ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ;
4. ಸದಸ್ಯತ್ವ ಮತ್ತು ಶೇರು ಷೆಡ್ಯೂಲು;
5. ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ;
6. ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;




7. ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;
8. ತಗಾದೆ ವಸೂಲಿ ಮತ್ತು ಉಳಿಕೆ ತಃಖ್ತೆ;
9. ಸುಸ್ತಿದಾರರ ಸದಸ್ಯರ ಪಟ್ಟಿ;
10. ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ;
11. ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು;
12. ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು;
13. ಸಾಲ ದೃಢೀಕರಣ ತಃಖ್ತೆಗಳು;
14. ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;
15. ಮೂರು ಅಥವಾ ಹೆಚ್ಚು ಆಡಳಿತ ಮಂಡಲಿಯ ಸಭೆಗಳಿಗೆ ಗೈರುಹಾಜರಾದ ನಿರ್ದೇಶಕರುಗಳ ಷೆಡ್ಯೂಲು;
16. ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರುಹಾಜರಾದ ಸದಸ್ಯರ ಷೆಡ್ಯೂಲು;
17. ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸಿದ ಬಗ್ಗೆ ಸದಸ್ಯರ ಷೆಡ್ಯೂಲು;
18. ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ;
19. ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;
20. ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು;
21. ಮೀಸಲು ಇತರ ನಿಧಿಗಳ ಷೆಡ್ಯೂಲು;
22. ಠೇವಣಿದಾರರ ಷೆಡ್ಯೂಲು;
23. ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು;
24. ಆಖೈರು ದಾಸ್ತಾನಿನ ಷೆಡ್ಯೂಲು;
25. ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; ಇತ್ಯಾದಿ

ಸಹಕಾರಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಕೈಕೊಂಡ ವ್ಯವಹಾರಗಳ ಚಿತ್ರಣ ಅದರ ಜೊತೆಗೆ ಮಾಡಿದ ಪ್ರಗತಿಗಳು, ಪ್ರಗತಿಯಲ್ಲಿ ಆದ ಕುಂಠಿತಗಳು, ಉತ್ಪನ್ನದಲ್ಲಿ ಹೆಚ್ಚಳ, ಉತ್ಪನ್ನದಲ್ಲಿ ಕಡಿತ, ಖರ್ಚುಗಳು ಹೆಚ್ಚು/ಕಡಿತ ಹಾಗೂ ವೆಸಗಿದ ವಿವಿಧ ತರಹದ ಖರ್ಚುಗಳು ಹಾಗೂ ಅವುಗಳ ವಿವರಗಳು, ಲಾಭ-

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

ನಿಮ್ಮ ಪ್ರಶ್ನೆ - ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ. – ಸಂಪಾದಕರು

– ವಿರಜಕುಮಾರಿ,
ವಿನೋಬನಗರ, ಶಿವಮೊಗ್ಗ.

ಪ್ರಶ್ನೆ 01 : ಸೌಹಾರ್ದ ಸಹಕಾರಿಯ ಉಪನಿಬಂಧನೆಗಳಲ್ಲಿ ನೋಂದಣಿಯಾದ ಕಾಲಕ್ಕೆ ಇದ್ದ ವಿಳಾಸದಲ್ಲಿನ ಕಾರ್ಯಾಲಯವನ್ನು ಆಡಳಿತ ಮಂಡಲಿ ತನಗೆ ಇಷ್ಟ ಬಂದಂತೆ ಬೈಲಾ ಬದಲಾವಣೆ ಮಾಡದೇ ಕಾರ್ಯಾಲಯವನ್ನು ಬೇರೆ ವಿಳಾಸದ ಜಾಗಕ್ಕೆ ಬದಲಾಯಿಸಬಹುದೇ?

ಉತ್ತರ : ಸಹಕಾರಿಯು ತನ್ನ ಉಪವಿಧಿಯ ಪ್ರಾವಾಧಾನಕ್ಕೆ ಅನುಗುಣವಾಗಿ ನೋಂದಾಯಿತ ವಿಳಾಸವನ್ನು ಬದಲಾಯಿಸಲು ಅವಕಾಶವಿರುತ್ತದೆ. ನೋಂದಾಯಿತ ಕಛೇರಿಯನ್ನು ಅನಿವಾರ್ಯ ಸಂದರ್ಭದಲ್ಲಿ ಪ್ರಸ್ತುತ ಇರುವ ಸ್ಥಳಕ್ಕೆ ಸಾಧ್ಯವಾದಷ್ಟು ಸಮೀಪದಲ್ಲಿಯೇ ಇರುವ ಬೇರೊಂದು ಕಟ್ಟಡಕ್ಕೆ ಸ್ಥಳಾಂತರಿಸುವುದಿದ್ದಲ್ಲಿ, ಸಾಮಾನ್ಯ ಸಭೆಯ ಘಟನೋತ್ತರ ಅನುಮತಿಗೆ ಒಳಪಟ್ಟು, ಆಡಳಿತ ಮಂಡಲಿಯಲ್ಲಿ ನಿರ್ಣಯಿಸಿ, ಸ್ಥಳಾಂತರ ಮಾಡಬಹುದು. ಪರಂತು, ನೋಂದಾಯಿತ ಕಛೇರಿಯನ್ನು ಕಾರ್ಯವ್ಯಾಪ್ತಿಯಲ್ಲಿರುವ ಅನ್ಯಸ್ಥಳಕ್ಕೆ ಉಪವಿಧಿ ತಿದ್ದುಪಡಿಯ ನಂತರ ಮಾತ್ರ ಸ್ಥಳಾಂತರಿಸಬಹುದು.

ಮೇಲಿನ ಎರಡೂ ಸಂದರ್ಭಗಳಲ್ಲಿ, ಕಛೇರಿಯನ್ನು ಸ್ಥಳಾಂತರಿಸಿದ ಹದಿನೈದು ದಿನಗಳೊಳಗೆ ಸದಸ್ಯರಿಗೆ, ಸಂಯುಕ್ತ ಸಹಕಾರಿಗೆ, ಸಂಬಂಧಿಸಿದ ರಿಜಿಸ್ಟ್ರಾರನಿಗೆ, ಲೆಕ್ಕಪರಿಶೋಧನಾ ನಿರ್ದೇಶಕನಿಗೆ, ಸಹಕಾರಿಯು ಸಂಯೋಜಿತವಾಗಿರುವ ಇನ್ನೊಂದು ಸಹಕಾರಿಗೆ ಮತ್ತು ಸಾಲ ನೀಡಿಕೆ ಏಜೆನ್ಸಿಗೆ ಲಿಖಿತವಾಗಿ ತಿಳಿಸತಕ್ಕದ್ದು ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿಯೂ ಪ್ರಕಟಿಸತಕ್ಕದ್ದು.

ಪ್ರಶ್ನೆ 02 : ಒಂದು ಸಂಸ್ಥೆಯಲ್ಲಿ ಕೆಲಸದಲ್ಲಿದ್ದು, ಅಲ್ಲಿ ಹಣ ದುರುಪಯೋಗದ ಕಾರಣದಿಂದಾಗಿ ವಜಾ ಮಾಡಲ್ಪಟ್ಟ ನೌಕರರನ್ನು ಸೌಹಾರ್ದ ಸಹಕಾರಿಯಲ್ಲಿ (ವಜಾ ಆಗಿರುವುದು ಗೊತ್ತಿದ್ದೂ ಸಹ) ಕೆಲಸಕ್ಕೆ ನೇಮಕಾತಿ ಮಾಡಿಕೊಳ್ಳಬಹುದೇ?

ಉತ್ತರ : ಒಂದು ಸಂಸ್ಥೆಯಲ್ಲಿ ಕೆಲಸದಲ್ಲಿದ್ದು, ಅಲ್ಲಿ ಹಣ ದುರುಪಯೋಗದ ಕಾರಣದಿಂದಾಗಿ ವಜಾ ಮಾಡಲ್ಪಟ್ಟ ನೌಕರರನ್ನು ಯಾವುದೇ ಸಹಕಾರಿ ಸಂಸ್ಥೆಯಲ್ಲಿ ಕೆಲಸಕ್ಕೆ ನೇಮಕಾತಿ ಮಾಡಿಕೊಳ್ಳುವುದು ಸೂಕ್ತವಲ್ಲ.

ಹಾನಿಗಳು, ಕೊಟ್ಟ ಸಾಲಗಳ ವಿವರ, ಅವುಗಳಲ್ಲಿ ಹೆಚ್ಚಳ, ಸಾಲ ವಸೂಲಿ, ಸುಸ್ತಿ ಬಾಕಿಗಳು ಹಾಗೂ ಅವುಗಳ ವಸೂಲಿಗಳು, ವಸೂಲಿಗೆ ಕೈಕೊಂಡ ಕಾನೂನು ಕ್ರಮಗಳು, ಸಹಕಾರಿಯು ಹೊಂದಿದ ಹೊಸ ಠೇವು ಮತ್ತು ಸಾಲ ಯೋಜನೆಗಳು, ಅವುಗಳ ಪ್ರಗತಿಗಳು, ಹೊಂದಿದ ಶಾಖೆಗಳು, ಶಾಖೆಗಳ ಪ್ರಗತಿಗಳು. ಮುಂತಾದ ಎಲ್ಲಾ ಮಾಹಿತಿಗಳ ವಿವರಗಳನ್ನು ಲೆಕ್ಕಪರಿಶೋಧಕರು ಸರ್ವೇ ಸಾಮಾನ್ಯವಾಗಿ ತಮ್ಮ ವರದಿಯಲ್ಲಿ ಕಾಣಿಸುವರು.

ಅದಲ್ಲದೇ, ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ವ್ಯವಸ್ಥಾಪಕರು ಕಾನೂನು, ಸಂಯುಕ್ತ ಸಹಕಾರಿಯ ಪರಿಪತ್ರ, ಸಹಕಾರಿಗೆ ಅನ್ವಯಿಸುವ ಎಲ್ಲಾ ಇತರೆ ಕಾನೂನುಗಳ ಪರಿಪಾಲನೆ ವಿಷಯದಲ್ಲಿ ಹೊಂದಿದ ಬದ್ಧತೆಗಳ ಬಗ್ಗೆ, ಉಲ್ಲಂಘನೆಯ ಬಗ್ಗೆ, ವ್ಯವಹಾರದಲ್ಲಿ ಮಾಡಿದ ಲೋಪದೋಷಗಳ ಬಗ್ಗೆ, ಸಹಕಾರಿಯು ಜರುಗಿಸಿದ ಆಡಳಿತ ಮಂಡಲಿಯ ಸಭೆಗಳು, ಸಭೆಯಲ್ಲಿಯ ನಿರ್ದೇಶಕರ ಹಾಜರಾತಿ, ಸಭೆಯ ನಡವಳಿಗಳು ಹಾಗೂ ಅವುಗಳ ಅನುಷ್ಠಾನ ಜರುಗಿಸಿದ ಸಾಮಾನ್ಯ ಸಭೆಗಳು ಹಾಗೂ ಸದರಿ ಸಭೆಯಲ್ಲಿ ಕೈಕೊಂಡ ನಿರ್ಣಯಗಳು ಹಾಗೂ ಅವುಗಳ ಅನುಷ್ಠಾನ, ನಿರ್ದೇಶಕರು ಪಡೆದ ಸಾಲಗಳು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಹಾಗೂ ಅವುಗಳ ವಸೂಲಿಗಳು, ಸುಸ್ತಿ ಬಾಕಿಗಳು ಇವೆಲ್ಲವುಗಳನ್ನು ಲೆಕ್ಕಪರಿಶೋಧಕರು ಪರಿಶೀಲಿಸಿ, ತಾವು ಕಂಡು ಬಂದ ಅಂಶಗಳನ್ನು ವರದಿಯಲ್ಲಿ ಕಾಣಿಸುವರು. ಸಂಸ್ಥೆಯಲ್ಲಿ ಆದ ಅವ್ಯವಹಾರಗಳ ವರದಿಗಳು, ಅವುಗಳ ಮೇಲೆ ಆಡಳಿತ ಮಂಡಲಿಯು ಕೈಕೊಂಡ ಕ್ರಮಗಳು ಇವೆಲ್ಲವುಗಳನ್ನು ಲೆಕ್ಕಪರಿಶೋಧಕರು ತಮ್ಮ ಲೆಕ್ಕಪರಿಶೋಧನೆಯಲ್ಲಿ ತಿಳಿಸುವರು.

ಪ್ರತಿಯೊಂದು ಸಹಕಾರಿಯು ತನ್ನ ಲೆಕ್ಕಪರಿಶೋಧನೆಯನ್ನು ವೇಳೆಗೆ ಸರಿಯಾಗಿ ಕೈಕೊಂಡು ಸದರಿ ವರ್ಷಕ್ಕೆ ಜರುಗುವ ಸಾಮಾನ್ಯ ಸಭೆಯಲ್ಲಿ ವರದಿಯನ್ನು ಮಂಡಿಸುವುದು ಆಡಳಿತ ಮಂಡಲಿಯ ಶಾಸನಬದ್ಧ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆಗೆ ಲೆಕ್ಕಪರಿಶೋಧನೆಯನ್ನು ವೇಳೆಗೆ ಸರಿಯಾಗಿ ಕೈಕೊಂಡು ಸಾಮಾನ್ಯ ಸಭೆಯಲ್ಲಿ ಮಂಡಿಸದೇ ಇದ್ದಲ್ಲಿ ಕಾನೂನು ಕಂಡಿಕೆ 25ರ ಪ್ರಕಾರ ನಿರ್ದೇಶಕರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಅನರ್ಹತೆಗೆ ಗುರಿಯಾಗಿ ಮತ್ತು ಹಾಗೇ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಒಂದು ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಮತ್ತು ಆ ಸಹಕಾರಿಯ ಅಥವಾ ಇತರ ಯಾವುದೇ ಸಹಕಾರಿಯ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗುತ್ತಾರೆ ಮತ್ತು ಯಾವುದೇ ಸಹಕಾರಿಯ ಆಡಳಿತ ಮಂಡಲಿಯು ಮತ್ತು ಮುಖ್ಯ ಕಾರ್ಯನಿರ್ವಾಹಕನು 33ನೇ ಪ್ರಕರಣ ಪ್ರಸಂಗಾನುಸಾರ, ಹಿಂದಿನ ವರ್ಷದ ತನ್ನ ಲೆಕ್ಕಪತ್ರಗಳನ್ನು ನಿಗದಿಪಡಿಸಿದ ಅವಧಿಯೊಳಗೆ ಪರಿಶೋಧನೆ ಮಾಡಿಸಲು ಮತ್ತು ಪರಿಶೋಧಿತ ಆರ್ಥಿಕ ತಃಖ್ತೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾದರೆ, ಅಂಥ ಸಹಕಾರಿಯ ಆಡಳಿತ ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಮತ್ತು ಮುಖ್ಯ ಕಾರ್ಯನಿರ್ವಾಹಕನು ತಲಾ ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆರು ತಿಂಗಳಗಳ ಕಾರಾಗೃಹವಾಸದಿಂದ ಅಥವಾ ಎರಡರಿಂದಲೂ ದಂಡನೆಗೆ ಗುರಿಯಾಗುತ್ತಾನೆ. ■

# ಸೌಹಾರ್ದ ಸಹಕಾರಿಗಳಿಗಾಗಿ ವಾರ್ಷಿಕ ಕಾರ್ಯಸೂಚಿ

ಭಾವುರಾವ್ ಗು.ಕುಲಕರ್ಣಿ, ವ್ಯವಸ್ಥಾಪಕರು, ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ.,

ಶ್ರೀ ಭಾವುರಾವ ಕುಲ್ಕರ್ಣಿಯವರು ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಸಿಂಧನೂರಿನಲ್ಲಿ ಪ್ರಧಾನ ಶಾಖೆಯ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸೌಹಾರ್ದ ಸಹಕಾರಿ ಕ್ಷೇತ್ರದ ತಮ್ಮ ಸುದೀರ್ಘ ಅನುಭವದ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ, ಅಧಿಕಾರಿಗಳಿಗೆ ಅನುಕೂಲವಾಗುವಂತೆ ಪ್ರತಿ ಮಾಹೆ ನಿರ್ವಹಿಸಬೇಕಾದ ಕಾರ್ಯಗಳನ್ನು ಪಟ್ಟಿ ಮಾಡಿ ವಾರ್ಷಿಕ ಕಾರ್ಯಸೂಚಿಯನ್ನು ಸಿದ್ಧಪಡಿಸಿದ್ದಾರೆ. ಈ ಕಾರ್ಯಸೂಚಿಯ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸೌಹಾರ್ದ ಸಹಕಾರಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. ಆದ್ದರಿಂದ, ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ಈ ವಾರ್ಷಿಕ ಕಾರ್ಯಸೂಚಿಯನ್ನು ಪ್ರಕಟಿಸಲಾಗಿದೆ.

ಸಹಕಾರಿಯ ಸುಗಮ ಕಾನೂನು ತೊಡಕು ರಹಿತ ಕಾರ್ಯಾಚರಣೆಗಾಗಿ, ಪ್ರತಿಯೊಂದು ಸಹಕಾರಿಯು ಆರ್ಥಿಕ ವರ್ಷ ಮುಕ್ತಾಯದ ನಂತರ ಕ್ರಮವಿಡಬೇಕಾದ ಅತ್ಯಂತ ಮಹತ್ವದ ವಿಷಯಗಳು ಮತ್ತು ಮುದ್ದತ್ತು ದಿನಾಂಕಗಳು.

| ಕ್ರ.ಸಂ. | ದಿನಾಂಕ | ಕಾರ್ಯ ಸೂಚಿಗಳು | ಕ್ರಮಗಳು ಕೈಗೊಂಡ ಬಗ್ಗೆ ವಿವರ |
|---|---|---|---|
| 01 | ಏಪ್ರಿಲ್ ತಿಂಗಳ ಆಡಳಿತ ಮಂಡಲಿಯ ಸಭೆಗಿಂತ ಮೊದಲು | ಶಾಖೆ ವ್ಯವಸ್ಥಾಪಕರ/ ಸಿಬ್ಬಂದಿಗಳ ಸಭೆ :<br>1. 2017–18ನೇ ಸಾಲಿನ ಪ್ರಗತಿ ಪರಿಶೀಲನೆ.<br>2. 2018–19ನೇ ಸಾಲಿಗೆ ಯೋಜನೆ/ ಗುರಿ ನಿಗದಿ.<br>3. ಸಿಬ್ಬಂದಿ ಸಭೆ.<br>4. ಇತರೆ ವಿಷಯಗಳು. | |
| 02 | ಹೊಸ ಆರ್ಥಿಕ ವರ್ಷದ ಮೊದಲ ಸಭೆ, ಏಪ್ರಿಲ್ 30ನೇ ದಿನಾಂಕಕ್ಕೆ ಮುಂಚೆ. | ಆಡಳಿತ ಮಂಡಲಿ ಮಾಸಿಕ ಸಭೆ :– ವಿಷಯಗಳು<br>1. 2017–18ನೇ ಸಾಲಿನ ಪ್ರಗತಿ ಪರಿಶೀಲನೆ.<br>2. 2018–19ನೇ ಸಾಲಿಗೆ ಯೋಜನೆ/ ಗುರಿ ನಿಗದಿ.<br>3. ಸೌಹಾರ್ದ ಸಹಕಾರಿಗೆ ಆರ್ಥಿಕ ಅಂಕಿ ಅಂಶಗಳನ್ನು ಕಳುಹಿಸುವುದು. (ಸುತ್ತೋಲೆ 10/04/2006)<br>4. ಅರ್ಹ ಮತದಾರರ ಯಾದಿ ಪ್ರಕಟಿಸುವುದು. [ಅಧಿನಿಯಮ 1997ರ ಕಲಂ 32(1)(ಡ)]<br>5. ಕರಡು ವಾರ್ಷಿಕ ವರದಿ ಮತ್ತು ಹಣಕಾಸು ವಿವರ ಪತ್ರಗಳನ್ನು ಮಂಡಲಿಯ ಅನುಮೋದನೆಗಾಗಿ ಮಂಡಿಸುವುದು.<br>6. ಲೆಕ್ಕ ಪರಿಶೋಧನೆಗಾಗಿ ಕರಡು ಲೆಕ್ಕ ಪತ್ರ ತಯಾರಿಸಿ ಸಾದರಪಡಿಸುವುದು. [ಅಧಿನಿಯಮ 1997ರ ಕಲಂ 31 (ಎಫ್) ಮತ್ತು 33(7)]<br>7. ಇತರೆ ವಿಷಯಗಳು. | |
| 03 | 30–04–2018 | ಅರ್ಹ ಮತದಾರರ ಯಾದಿ ಪ್ರಕಟಿಸುವುದು ಮತ್ತು ವಿವಿಧ ಸೇವೆಗಳ ಸದಸ್ಯವಾರು ಬಳಕೆಯ ಬಗ್ಗೆ ವಿವರಗಳನ್ನುಳ್ಳ ಪಟ್ಟಿಯನ್ನು ತಯಾರಿಸುವುದು ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿಯಾಗಿರುತ್ತದೆ. [ಕಾಯ್ದೆ ಕಲಂ 32(1)(ಡ)] | |
| 04 | 30–04–2018 | ಸಹಕಾರಿಯ ಉಪವಿಧಿಯಂತೆ, ಸದಸ್ಯರು ಕನಿಷ್ಠ ವ್ಯವಹಾರ ನಡೆಸಿದ್ದಾರೆಯೇ ಎನ್ನುವುದನ್ನು ಪರಿಶೀಲಿಸಿ ಕನಿಷ್ಠ ವ್ಯವಹಾರ ನಡೆಸದ ಸದಸ್ಯರ ಪಟ್ಟಿ ತಯಾರಿಸುವುದು ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿಯಾಗಿರುತ್ತದೆ. | |
| 05 | 30–04–2018 | ಸೌಹಾರ್ದ ಸಂಯುಕ್ತ ಸಹಕಾರಿಗೆ ಆರ್ಥಿಕ ಅಂಕಿ ಅಂಶಗಳನ್ನು ಕಳುಹಿಸುವುದು. (ಸುತ್ತೋಲೆ ದಿ: 10–04–2006) | |
| 06 | 30–04–2018 | ಸದಸ್ಯರ ರಿಜಿಸ್ಟರ್ [ಕಾಯ್ದೆ ಕಲಂ 32(1)(ಡ)] | |
| 07 | 30–04–2018 | ಕರಡು ವಾರ್ಷಿಕ ವರದಿ ಮತ್ತು ಹಣಕಾಸು ವಿವರ ಪತ್ರಗಳನ್ನು ಮಂಡಲಿಯ ಅನುಮೋದನೆಗಾಗಿ ಮಂಡಿಸುವುದು. [ಕಾಯ್ದೆ ಕಲಂ 31 (ಎಫ್)] | |
| 08 | 30–04–2018 | ಲೆಕ್ಕಪರಿಶೋಧನೆಗಾಗಿ ಕರಡು ಲೆಕ್ಕ ಪತ್ರ ತಯಾರಿಸಿ ಸಾದರಪಡಿಸುವುದು. [ಕಾಯ್ದೆ ಕಲಂ 33(7)] | |

| | | | |
|---|---|---|---|
| 09 | ಜುಲೈ/ ಆಗಸ್ಟ್ ತಿಂಗಳ ಆಡಳಿತ ಮಂಡಲಿ ಮಾಸಿಕ ಸಭೆ | ಮಹಾಸಭೆ ಜರುಗಿಸುವ ಕುರಿತು, ಸಭೆಯ ದಿನಾಂಕ, ಸ್ಥಳ, ಸಮಯ ಮತ್ತು ವಿಷಯಗಳನ್ನು ಅಂತಿಮಗೊಳಿಸುವುದು.<br>1. ಲೆಕ್ಕಪರಿಶೋಧನಾ ವರದಿ ಅನುಮೋದನೆ/ ನ್ಯೂನತೆಗಳಿಗೆ ಅನುಪಾಲನಾ ವರದಿ ತಯಾರಿಸಿ ಅನುಮೋದನೆ.<br>2 ವಾರ್ಷಿಕ ಮುಂಗಡ ಪತ್ರ (2019–20ನೇ ಸಾಲಿಗೆ) ಮುಂತಾದವುಗಳನ್ನು ತಯಾರಿಸಿ, ವಾರ್ಷಿಕ ಸಾಮಾನ್ಯ ಸಭೆಗೆ ಸಾದರಪಡಿಸುವ ಬಗ್ಗೆ ಆಡಳಿತ ಮಂಡಲಿ ಸಭೆಯ ಅನುಮೋದನೆಗೆ ಮಂಡಿಸುವುದು.<br>3 ಕಾಯ್ದೆ ಕಲಂ 23(3) ರನ್ವಯ ಉಳಿದ ವಿಷಯಗಳು. | |
| 10 | ಸಾಮಾನ್ಯ ಸಭೆ ನೋಟೀಸ್ | 1. ಸಾಮಾನ್ಯ ಸಭೆಗೆ 15 ದಿನಗಳ ಮುಂಚೆ ಮತ್ತು ಉಪವಿಧಿಗಳ ತಿದ್ದುಪಡಿ ಇದ್ದಲ್ಲಿ 20 ಸ್ಪಷ್ಟ ದಿನಗಳ ಮುಂಚೆ ನೋಟೀಸ್ ಕಳುಹಿಸಬೇಕು.<br>2. ಸ್ಥಳೀಯವಾಗಿ ಹೆಚ್ಚು ಪರಿಚಲನೆಯಲ್ಲಿರುವ ವೃತ್ತಪತ್ರಿಕೆಯಲ್ಲಿ ಸಂಕ್ಷಿಪ್ತವಾಗಿ ಪ್ರಕಟಿಸಬೇಕು. | |
| 11 | 01–09–2018 | ಲೆಕ್ಕ ಪರಿಶೋಧಕನು, ಲೆಕ್ಕ ಪರಿಶೋಧನಾ ವರದಿಯನ್ನು ಪ್ರತಿ ವರ್ಷ ಸೆಪ್ಟೆಂಬರ್ ಒಂದರೊಳಗಾಗಿ ಸಹಕಾರಿಗೆ ಮತ್ತು ಅದರ ಪ್ರತಿಗಳನ್ನು ಸಂಯುಕ್ತ ಸಹಕಾರಿಗೆ, ನಿಬಂಧಕರಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಕಳುಹಿಸತಕ್ಕದ್ದು. [ಕಾಯ್ದೆ ಕಲಂ 33 (8)] | |
| 12 | 24–09–2018 | ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳ ಇಪ್ಪತ್ತೈದರೊಳಗಾಗಿ, 23ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಉಕ್ತವಾಗಿರುವ ಕಾರ್ಯಕಲಾಪಗಳನ್ನು ನಿರ್ವಹಿಸಲು, ಒಂದು ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು (ಕಾಯ್ದೆ ಕಲಂ 30) | |
| 13 | ಸಾಮಾನ್ಯ ಸಭೆಯ ನೋಟೀಸ್ ತಯಾರಿಸುವಾಗ ಸದರಿ ವಿಷಯಗಳು ಅಜೆಂಡಾದಲ್ಲಿರುವಂತೆ ಜಾಗ್ರತೆ ವಹಿಸುವುದು. | ಉಪವಿಧಿಗಳಲ್ಲಿ ನಿದಿರ್ಷ್ಟಪಡಿಸಿದಂತೆ ವಾರ್ಷಿಕ ಸಾಮಾನ್ಯ ಸಭೆಯ ಅನುಮೋದನೆಗಾಗಿ–<br>1. ಹಿಂದಿನ ವರ್ಷದಲ್ಲಿ ಸಹಕಾರಿಯು ನಡೆಸಿದ ಕಾರ್ಯಕ್ರಮಗಳ ಮತ್ತು ಪ್ರಗತಿಯ ವರದಿ.<br>2. ಸಾಮಾನ್ಯ ಸಭೆಯ ವಿಷಯಗಳು ಮತ್ತು ಅವುಗಳ ಮೇಲೆ ಟಿಪ್ಪಣಿ.<br>3. ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ವರದಿ.<br>4. ಲೆಕ್ಕ ಪರಿಶೋಧನಾ ಮತ್ತು ಅನುಪಾಲನಾ ವರದಿ.<br>5. ದೀರ್ಘಾವಧಿ ಯೋಜನೆ ಮತ್ತು ವಾರ್ಷಿಕ ಕಾರ್ಯಾಚರಣೆ ಯೋಜನೆ.<br>6. ವಾರ್ಷಿಕ ಮುಂಗಡ ಪತ್ರ, ಮುಂತಾದವುಗಳನ್ನು ತಯಾರಿಸಿ ವಾರ್ಷಿಕ ಸಾಮಾನ್ಯ ಸಭೆಗೆ ಸಾದರಪಡಿಸುವ ಬಗ್ಗೆ ಆಡಳಿತ ಮಂಡಲಿ ಸಭೆಯ ಅನುಮೋದನೆಗೆ ಮಂಡಿಸುವುದು.<br>7. ಸಹಕಾರಿಯು ತನ್ನ ನೋಂದಾಯಿತ ಕಛೇರಿಯ ವಿಳಾಸವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬದಲಾಯಿಸಿಕೊಳ್ಳುವ ಬಗ್ಗೆ.<br>8. ಸಹಕಾರಿಯ ಶಾಖೆ ತೆರೆಯುವ ಕುರಿತು.<br>9. ಸಹಕಾರಿಯ ಅಧಿಕೃತ ಶೇರು ಬಂಡವಾಳ ಹೆಚ್ಚಿಸುವುದಿದ್ದಲ್ಲಿ ಅದರ ಕುರಿತು.<br>10. ಸಹಕಾರಿಗೆ ಸ್ವಂತ ನಿವೇಶನ ಖರೀದಿ/ ಕಟ್ಟಡ ನಿರ್ಮಾಣ ಕುರಿತು.<br>11. ಠೇವಣಿ/ ಸಾಲದ ಉಪನಿಯಮಗಳು/ ಸಿಬ್ಬಂದಿ ಸೇವಾ ನಿಯಮಗಳು ಬಗ್ಗೆ.<br>12. ಕಾಯ್ದೆ ಕಲಂ 23(3)ರನ್ವಯ ಉಳಿದ ವಿಷಯಗಳು. | |
| 14 | ಸಾಮಾನ್ಯ ಸಭೆ ಜರುಗಿದ 30 ದಿನಗಳೊಳಗಾಗಿ | ಲೆಕ್ಕ ಪರಿಶೋಧನಾ ಅನುಪಾಲನಾ ವರದಿಯನ್ನು, ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿಬಂಧಕರಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಸಂಯುಕ್ತ ಸಹಕಾರಿಗೆ ಕ್ರಮ ತೆಗೆದುಕೊಂಡ ವರದಿಯನ್ನು ಸಲ್ಲಿಸತಕ್ಕದ್ದು. [ಕಾಯ್ದೆ ಕಲಂ 33 (10)] | |
| 15 | ಲೆಕ್ಕಪರಿಶೋಧಕರಿಗೆ | 1. ಲೆಕ್ಕಪರಿಶೋಧಕರಿಗೆ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಕಳುಹಿಸಬೇಕು.<br>2. ಲೆಕ್ಕ ಪರಿಶೋಧಕರು ಸಾಮಾನ್ಯ ಸಭೆಗೆ ಹಾಜರಾಗಿದ್ದಕ್ಕೆ "ಹಾಜರಿ ಪ್ರಮಾಣ ಪತ್ರ" ನೀಡಬೇಕು. | |

| | | | |
|---|---|---|---|
| 16 | ಸಾಮಾನ್ಯ ಸಭೆ ಜರುಗಿದ 7 ದಿನಗಳೊಳಗಾಗಿ | ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮುಂಬರುವ ಸಾಲಿಗೆ ನೇಮಕವಾದ ಶಾಸನಬದ್ಧ ಲೆಕ್ಕಪರಿಶೋಧಕರಿಗೆ/ ಲೆಕ್ಕ ಪರಿಶೋಧಿಸುವ ಸಂಸ್ಥೆಗಳಿಗೆ, ಸಾಮಾನ್ಯ ಸಭೆ ನಡೆಸಿದ ಏಳು ದಿನಗಳೊಳಗಾಗಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ನೇಮಕಾತಿ ಪತ್ರ ಕಳುಹಿಸುವುದು ಹಾಗೂ ಸದರಿ ಮಾಹಿತಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕರಿಗೂ ಹಾಗೂ ಸಂಯುಕ್ತ ಸಹಕಾರಿಗೂ ಸಹ ತಿಳಿಸತಕ್ಕದ್ದು. [ನಿಯಮ 8ಬಿ (8)] | |
| 17 | ಸಾಮಾನ್ಯ ಸಭೆ ಜರುಗಿದ 30 ದಿನಗಳೊಳಗಾಗಿ | ಸಹಕಾರ ಶಿಕ್ಷಣ ನಿಧಿಗೆ ಪಾವತಿ :– ಪ್ರತಿ ಸಹಕಾರಿಯು ತನ್ನ ಸಹಕಾರ ನಿಧಿ ವಂತಿಗೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಖಾತೆಗೆ ತನ್ನ ವಾರ್ಷಿಕ ಸಾಮಾನ್ಯ ಸಭೆ ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಜಮಾ ಮಾಡತಕ್ಕದ್ದು. (ನಿಯಮ 10ಎ) | |
| 18 | 30–09–2018 | ಸೌಹಾರ್ದ ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕವನ್ನು ಕಳುಹಿಸುವುದು. (ಕಾಯ್ದೆ ಕಲಂ 62) | |
| 19 | 30–09–2018 | ಕಾಯ್ದೆ ಕಲಂ 34 ಮಾಹಿತಿಯನ್ನು ಒದಗಿಸುವುದು :– ಪ್ರತಿಯೊಂದು ಸಹಕಾರಿಯು ಸಹಕಾರ ವರ್ಷ ಮುಗಿದ ಆರು ತಿಂಗಳೊಳಗೆ ಈ ಮುಂದಿನ ವಿದ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.<br>1. ಹಿಂದಿನ ಸಹಕಾರಿ ವರ್ಷದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ ಮತ್ತು ಮುಂಬರುವ ಸಹಕಾರಿ ವರ್ಷದ ಬಗ್ಗೆ ಕಾರ್ಯಕ್ರಮ.<br>2. ಲೆಕ್ಕಪತ್ರಗಳ ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆಗಳು.<br>3. ಸಾಮಾನ್ಯ ನಿಕಾಯವು ಅನುಮೋದಿಸಿದಂತೆ ಹೆಚ್ಚುವರಿಯನ್ನು ವಿಲೆ ಮಾಡುವ ಬಗ್ಗೆ ಯೋಜನೆ.<br>4. ನಿರ್ದೇಶಕರುಗಳ ಪಟ್ಟಿ ಹಾಗೂ ಅವರ ಪದಾವಧಿ.<br>5. ಸಹಕಾರಿಯ ಉಪವಿಧಿಗಳ ತಿದ್ದುಪಡಿಗಳ ಪಟ್ಟಿ ಮತ್ತು<br>6. ಸಾಮಾನ್ಯ ನಿಕಾಯದ ಸಭೆಯನ್ನು ಮತ್ತು ಚುನಾವಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ನಡೆಸಿದ ದಿನಾಂಕದ ಬಗ್ಗೆ ಘೋಷಣೆ.<br>7. ಈ ಅಧಿನಿಯಮದ ಉಪಬಂಧಗಳಡಿ ನಿಬಂಧಕರು ಹಾಗೂ ಸಂಯುಕ್ತ ಸಹಕಾರಿಯು ಅಪೇಕ್ಷಿಸುವ ಇತರೆ ಯಾವುದೇ ಮಾಹಿತಿ. | |
| 20 | ಸಾಮಾನ್ಯ ಸಭೆ ಜರುಗಿದ 30 ದಿನಗಳೊಳಗಾಗಿ | ನಿಗದಿತ ತಃಖ್ತೆ ಸಂಖ್ಯೆ 1 ರಿಂದ 5 ರವರೆಗೆ ಪೂರ್ಣ ಭರ್ತಿ ಮಾಡಿ ಈ ಕೆಳಗಿನ ಲಗತ್ತುಗಳೊಂದಿಗೆ ಸಂಬಂಧಪಟ್ಟ ನಿಬಂಧಕರಿಗೆ ಕಳುಹಿಸುವುದು.<br>ಲಗತ್ತುಗಳು :<br>1. ಸಾಮಾನ್ಯ ಸಭೆಯ ನೋಟೀಸ್ ಪ್ರತಿ.<br>2. ಸಾಮಾನ್ಯ ಸಭೆಯ ನೋಟೀಸನ್ನು ಸ್ಪಷ್ಟ ಇಪ್ಪತ್ತು ದಿನಗಳ ಮೊದಲು ಕಳುಹಿಸಿದ್ದಕ್ಕೆ ದಾಖಲೆ.<br>3. ಸಾಮಾನ್ಯ ಸಭೆಯ ನಡವಳಿಕೆ ದೃಢೀಕೃತ ಪ್ರತಿ.<br>4. ಸಾಮಾನ್ಯ ಸಭೆಯ ಸದಸ್ಯರ ಹಾಜರಾತಿ ಪುಸ್ತಕದ ಪ್ರತಿ.<br>5. ಸೂಚಿತ ತಿದ್ದುಪಡಿಯ ವಿವರಗಳ ಪ್ರತಿ.<br>6. ಸಹಕಾರಿಯ ಉಪನಿಯಮಗಳ ಪ್ರತಿ.<br>7. ಸಹಕಾರಿಯ ಆರ್ಥಿಕ ವಿವರಗಳು.<br>8. ಉಪವಿಧಿ ತಿದ್ದುಪಡಿಗೆ ಶುಲ್ಕ ಪಾವತಿಸಿದ ಖಜಾನೆಯ ಚಲನ್ ಅಥವಾ ಡಿಮಾಂಡ್ ಡ್ರಾಫ್ಟ್ | |
| 21 | ಲಾಭಾಂಶ ವಿಂಗಡಣೆ | ಸಾಮಾನ್ಯ ಸಭೆಯಲ್ಲಿ ಅನುಮೋದಿಸಿದಂತೆ ಲಾಭಾಂಶ ವಿಂಗಡಣೆಯನ್ನು, ವಾಸ್ತವಿಕವಾಗಿ ಸಂಬಂಧಪಟ್ಟ ನಿಧಿಗಳ ಖಾತೆಗೆ, ಡಿವಿಡೆಂಡ್ ಖಾತೆಗಳಿಗೆ ಜಮಾ–ಖರ್ಚು ಮಾಡುವುದು. | |
| 22 | 30–09–2018 | ಆದಾಯ ತೆರಿಗೆ ಕಾಯ್ದೆ ಪ್ರಕರಣ 139(1) ರಂತೆ ಆದಾಯ ತೆರಿಗೆ ವಿವರಗಳನ್ನು ಕರನಿರ್ಧಾರಣ ವರ್ಷದ ರಿಟರ್ನ್ ಸಲ್ಲಿಸಬೇಕು. | |

**ವಿಶೇಷ ಸೂಚನೆ :** ಈ ಪ್ರಕಟಣೆಗೆ ಸಂಬಂಧಿಸಿದಂತೆ ಏನಾದರೂ ಹೆಚ್ಚುವರಿ ಮಾಹಿತಿಗಳನ್ನು ಸೇರಿಸುವುದಿದ್ದಲ್ಲಿ ಸೌಹಾರ್ದ ಸಹಕಾರಿಗಳ ಅನುಭವಿ ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಕಳುಹಿಸಲು ಕೋರಿದೆ. ತಾವು ಕಳುಹಿಸುವ ಎಲ್ಲಾ ವಿಷಯಗಳನ್ನು ಕ್ರೋಢೀಕರಿಸಿ, ಅಂತಿಮಗೊಳಿಸಿ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶಿಯಾಗಿ ಕಳುಹಿಸಲಾಗುವುದು.

# 50 ಕೋಟಿ ರೂ.ಗೂ ಹೆಚ್ಚಿನ ಎನ್‌ಪಿಎ ತನಿಖೆಗೆ ಕೇಂದ್ರ ಆದೇಶ




**ಹೊಸದಿಲ್ಲಿ :** ಸಾರ್ವಜನಿಕ ಬ್ಯಾಂಕ್‌ಗಳು ತಮ್ಮಲ್ಲಿರುವ 50 ಕೋಟಿ ರೂ.ಗಿಂತ ಹೆಚ್ಚು ಮೊತ್ತದ ಎಲ್ಲ ವಸೂಲಾಗದ ಸಾಲ (ಎನ್‌ಪಿಎ) ಪ್ರಕರಣಗಳನ್ನು ತನಿಖೆ ಮಾಡಬೇಕು. ಹಾಗೂ ಅಗತ್ಯವಿದ್ದರೆ ಸಿಬಿಐ ತನಿಖೆಗೂ ವಹಿಸಬೇಕು ಎಂದು ಕೇಂದ್ರ ಸರಕಾರ ಆದೇಶಿಸಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಬಯಲಾಗಿರುವ 12,700 ಕೋಟಿ ರೂ.ಗಳ ಹಗರಣದ ಹಿನ್ನೆಲೆಯಲ್ಲಿ, ಕೇಂದ್ರ ಸರಕಾರ ಹಲವು ಕಟ್ಟುನಿಟ್ಟಿನ ಸೂಚನೆಗಳನ್ನು ಸಾರ್ವಜನಿಕ ಬ್ಯಾಂಕ್‌ಗಳಿಗೆ ನೀಡಿದೆ. ಮುಖ್ಯವಾಗಿ 50 ಕೋಟಿ ರೂ. ಮೇಲ್ಪಟ್ಟ ಎನ್‌ಪಿಎಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಅಗತ್ಯ ಇದ್ದರೆ ಸಿಬಿಐ ತನಿಖೆಗೂ ಒಳಪಡಿಸಬೇಕು ಎಂದು ಹಣಕಾಸು ಕಾರ್ಯದರ್ಶಿ ಶ್ರೀ ರಾಜೀವ್ ಕುಮಾರ್ ತಿಳಿಸಿದ್ದಾರೆ.

**15 ದಿನಗಳ ಗಡುವು :** ಸಾರ್ವಜನಿಕ ಬ್ಯಾಂಕ್‌ಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ, ವಹಿವಾಟಿನಲ್ಲಿ ಹೆಚ್ಚುತ್ತಿರುವ ಅಪಾಯಗಳು, ತಾಂತ್ರಿಕತೆಯ ಲೋಪ ದೋಷಗಳನ್ನು ಹತ್ತಿಕ್ಕಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ 15 ದಿನಗಳೊಳಗೆ ವರದಿ ಸಲ್ಲಿಸಬೇಕು. ಜತೆಗೆ ಹಿರಿಯ ಅಧಿಕಾರಿಗಳ ಉತ್ತರದಾಯಿತ್ವದ ಬಗ್ಗೆ ಸ್ಪಷ್ಟತೆ ಇರಬೇಕು ಎಂದು ಹಣಕಾಸು ಇಲಾಖೆಯು ಬ್ಯಾಂಕ್‌ಗಳಿಗೆ ಸೂಚಿಸಿದೆ.

ಬ್ಯಾಂಕ್‌ಗಳು ತಮ್ಮ ವಹಿವಾಟಿನಲ್ಲಿ ಎಷ್ಟು ಅಪಾಯಗಳು ಇವೆ ಹಾಗೂ ಅವುಗಳನ್ನು ನಿರ್ವಹಿಸಲು ಯಾವೆಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಹಾಗೂ ಯಾವ ವಿಭಾಗದಲ್ಲಿ ಸುಧಾರಣೆ ಮಾಡಬೇಕಾಗಿದೆ ಎಂಬುದನ್ನು ತಿಳಿಸಬೇಕು ಎಂದು ಕೇಂದ್ರ ಸೂಚಿಸಿದೆ.

## ಎಸ್‌ಬಿಐ : ಠೇವಣಿಗಳ ಮೇಲಿನ ಬಡ್ಡಿದರ ಹೆಚ್ಚಳ

**ಮುಂಬೈ :** ಭಾರತೀಯ ಸ್ಟೇಟ್ ಬ್ಯಾಂಕ್ ವಿವಿಧ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ.0.75ರವರೆಗೆ ಹೆಚ್ಚಿಸಿದೆ. ಹೊಸ ಬಡ್ಡಿ ದರಗಳು ರೂ. 1 ಕೋಟಿಗಿಂತ ಕಡಿಮೆ ಮೊತ್ತದ ಮತ್ತು ರೂ.1 ಕೋಟಿಗಿಂತ ಹೆಚ್ಚಿನ ಮೊತ್ತದ ವಿವಿಧ ಕಾಲಾವಧಿಯ ಠೇವಣಿಗಳಿಗೆ ಅನ್ವಯವಾಗಲಿವೆ. ರೂ. 1 ಕೋಟಿಗಿಂತ ಕಡಿಮೆ ಮೊತ್ತದ ಠೇವಣಿಗಳ ಮೇಲೆ ಶೇ. 0.50ರವರೆಗೆ ಬಡ್ಡಿದರ ಹೆಚ್ಚಿಸಲಾಗಿದೆ. ಹೊಸದರ ಬುಧವಾರದಿಂದಲೇ ಅನ್ವಯವಾಗಲಿವೆ.




ಒಂದು ವರ್ಷದಿಂದ ಎರಡು ವರ್ಷಗಳ ಒಳಗಿನ ಅವಧಿಯ ಠೇವಣಿಗಳ ಮೇಲಿನ ಈ ಹಿಂದಿನ ಶೇ. 6.25ರಷ್ಟು ಬಡ್ಡಿ ದರವನ್ನು ಶೇ. 6.40ಕ್ಕೆ (ಶೇ. 0.15) ಹೆಚ್ಚಿಸಲಾಗಿದೆ.

ಎರಡರಿಂದ ಹತ್ತು ವರ್ಷಗಳವರೆಗಿನ ಚಿಲ್ಲರೆ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ. 0.50ರಷ್ಟು ಹೆಚ್ಚಿಸಿದೆ. ಶೇ. 6ರಷ್ಟಿದ್ದ ಬಡ್ಡಿ ದರವನ್ನು ಈಗ ಶೇ. 6.50ಕ್ಕೆ ಹೆಚ್ಚಿಸಲಾಗಿದೆ. ರೂ. 1 ಕೋಟಿಯಿಂದ 10 ಕೋಟಿವರೆಗಿನ 1 ವರ್ಷದಿಂದ ಎರಡು ವರ್ಷಗಳ ಅವಧಿಯ ಠೇವಣಿಗಳ ಮೇಲೂ ಶೇ. 0.50ರಷ್ಟು ಬಡ್ಡಿದರ ಹೆಚ್ಚಿಸಲಾಗಿದೆ. ಹೊಸ ಬಡ್ಡಿ ದರ ಶೇ. 6.75ರಷ್ಟು ಇರಲಿದೆ. ಎರಡು ವರ್ಷಗಳಿಂದ ಮೂರು ವರ್ಷಗಳವರೆಗಿನ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ. 6.75ಕ್ಕೆ (ಶೇ. 0.75ರಷ್ಟು) ಏರಿಸಲಾಗಿದೆ.

## ಎಸ್‌ಬಿಐ : ಸಾಲಗಳ ಮೇಲಿನ ಬಡ್ಡಿ ದರ ಹೆಚ್ಚಳ

**ಮುಂಬೈ :** ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಮತ್ತು ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್ ಸಾಲಗಳ ಮೇಲಿನ ಬಡ್ಡಿ ದರವನ್ನು ಹೆಚ್ಚಿಸಿವೆ.

ಎಸ್‌ಬಿಐ ಶೇ. 0.20, ಪಿಎನ್‌ಬಿ ಮತ್ತು ಐಸಿಐಸಿಐ ಬ್ಯಾಂಕ್ ಶೇ 0.15ರಷ್ಟು ಬಡ್ಡಿ ದರ ಹೆಚ್ಚಿಸಿವೆ. ಹೊಸ ದರಗಳು ತಕ್ಷಣದಿಂದಲೇ ಜಾರಿಗೆ ಬಂದಿವೆ ಎಂದು ಈ ಬ್ಯಾಂಕ್‌ಗಳು ತಿಳಿಸಿವೆ. ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಗದು ಪೂರೈಕೆ ಕಡಿಮೆಯಾಗಿರುವ ಕಾರಣಕ್ಕೆ ಎಸ್‌ಬಿಐ ಠೇವಣಿಗಳ ಮೇಲಿನ ಬಡ್ಡಿ ದರಗಳನ್ನು ಶೇ. 0.75ರವರೆಗೆ ಹೆಚ್ಚಿಸಿತ್ತು.

ಅದರ ಬೆನ್ನಲ್ಲೇ, ಈಗ ಸಾಲಗಳ ಮೇಲಿನ ಬಡ್ಡಿ ದರಗಳನ್ನು ಶೇ 0.20ರಷ್ಟು (ಶೇ. 8.15ಕ್ಕೆ) ಹೆಚ್ಚಿಸಿದೆ. 2016ರ ಏಪ್ರಿಲ್1 ರಿಂದೀಚೆಗೆ ಪಡೆದಿರುವ ಮತ್ತು ಹೊಸದಾಗಿ ಪಡೆಯುವ ಗೃಹ, ಕಾರು, ಶಿಕ್ಷಣ ಮತ್ತು ವೈಯಕ್ತಿಕ ಸಾಲಗಳಿಗೆ ಈ ಹೊಸ ಬಡ್ಡಿ ದರ ಅನ್ವಯವಾಗಲಿದೆ. 2016ರ ಏಪ್ರಿಲ್ ನಂತರ ಬ್ಯಾಂಕ್ ಇದೇ ಮೊದಲ ಬಾರಿಗೆ ಬಡ್ಡಿ ದರ ಹೆಚ್ಚಿಸುವ ನಿರ್ಧಾರ ಕೈಗೊಂಡಿದೆ.

2017ರ ನವೆಂಬರ್ ತಿಂಗಳಿನಿಂದೀಚೆಗೆ ಮೂರನೇ ಬಾರಿಗೆ ಠೇವಣಿಗಳ ಮೇಲಿನ ಬಡ್ಡಿ ದರ ಹೆಚ್ಚಿಸಿದೆ. ಠೇವಣಿಗಳ ಮೇಲಿನ ಬಡ್ಡಿ ದರ ಹೆಚ್ಚಳ ನಿರ್ಧಾರವು, ಬ್ಯಾಂಕ್ ಶೀಘ್ರದಲ್ಲಿಯೇ ಸಾಲಗಳ ಮೇಲಿನ ಬಡ್ಡಿ ದರವನ್ನೂ ಹೆಚ್ಚಿಸಲಿದೆ ಎನ್ನುವ ಸುಳಿವು ನೀಡಿತ್ತು. ಇತರ ಬ್ಯಾಂಕ್‌ಗಳೂ ಈಗ ಇದೇ ಹಾದಿ ತುಳಿಯುತ್ತಿವೆ.

'ಎಸ್‌ಬಿಐ'ನ ಠೇವಣಿಗಳ ಮೇಲಿನ ಹೆಚ್ಚುವರಿ ವೆಚ್ಚ ಆಧರಿಸಿದ (ಎಂಸಿಎಲ್‌ಆರ್) ಬಡ್ಡಿ ದರವು ಇದಕ್ಕೂ ಮೊದಲು ಶೇ. 7.95ರಷ್ಟಿತ್ತು. ಅದು ಈಗ ಶೇ 8.15ರಷ್ಟಾಗಲಿದೆ. 'ಪಿಎನ್‌ಬಿ' ಬಡ್ಡಿ ದರ ಈಗ ಶೇ. 8.30ರಷ್ಟಾಗಲಿದೆ. ಬ್ಯಾಂಕ್ ತನ್ನ ಠೇವಣಿಗಳ ಮೇಲಿನ ಬಡ್ಡಿ ದರವನ್ನೂ ಶೇ. 0.45ರಷ್ಟು ಹೆಚ್ಚಿಸಿದೆ. ಬ್ಯಾಂಕ್‌ನ ವಿವಿಧ ಸಾಲಗಳ ಮೇಲಿನ ಬಡ್ಡಿ ದರವು ಈಗ 'ಎಂಸಿಎಲ್‌ಆರ್' ಆಧರಿಸಿರುತ್ತದೆ.



# ಹಣಕಾಸು ನಿರ್ಣಯ ಮತ್ತು ಠೇವಣಿ ವಿಮೆ ಮಸೂದೆ, 2017
## (Financial Resolution and Deposit Insurance Bill, 2017)

▸▸ ಸಿಎ॥ ಬಿ.ವಿ.ರವೀಂದ್ರನಾಥ್, ಸಾಗರ

ಕಳೆದ ಆಗಸ್ಟ್ ತಿಂಗಳಿನಲ್ಲಿ ಲೋಕಸಭೆಯಲ್ಲಿ ಮಂಡಿಸಲಾದ ಮಸೂದೆ ಈಗ ಸುದ್ದಿ ಮಾಧ್ಯಮಗಳಲ್ಲಿ ಮತ್ತು ದೂರದರ್ಶನಗಳ ಚಾನೆಲ್‌ಗಳಲ್ಲಿ ಸುದ್ದಿ ಮಾಡುತ್ತಿದೆ. ಬ್ಯಾಂಕುಗಳು, ವಿಮಾ ಕಂಪನಿಗಳು, ಬ್ಯಾಂಕೇತರ ಹಣಕಾಸು ಸೇವಾ ಸಂಸ್ಥೆಗಳು ದಿವಾಳಿಯಾದಲ್ಲಿ ಅವುಗಳ ಕುರಿತು ಮೇಲ್ವಿಚಾರಣೆ ನೋಡಿಕೊಳ್ಳುವ ರೂಪುರೇಷೆಗಳ ಪ್ರಸ್ತಾಪವಿರುವ ಈ ಮಸೂದೆ ಈಗ ಜಂಟಿ ಸಂಸದೀಯ ಸಮಿತಿಯ ಪರಿಶೀಲನೆಯಲ್ಲಿದೆ. ಸಂಸತ್ತಿನ ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಈ ಮಸೂದೆಯು ಚರ್ಚೆಗೆ ಬರಲಿದೆ.

ಹಣಕಾಸು ಸಂಸ್ಥೆಗಳು ದಿವಾಳಿಯಾಗುವುದನ್ನು ತಪ್ಪಿಸುವುದು ಮತ್ತು ಠೇವಣಿದಾರರ ಹಿತಾಸಕ್ತಿಗಳನ್ನು ಕಾಪಾಡುವುದು – ಹೀಗೆ ಎರಡನ್ನೂ ಸಾಧಿಸುವುದು ಸರಕಾರದ ಚಿಂತನೆಯಾಗಿದೆ.

ಈಗಿನ ಪ್ರಸ್ತಾಪದಂತೆ ಈ ಮಸೂದೆಯಡಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಆರ್ಥಿಕ ಸಂಸ್ಥೆಗಳ ಮೇಲೆ ನಿಗಾ ವಹಿಸಲು, ಅವುಗಳ ವೈಫಲ್ಯಗಳ ಸಾಧ್ಯತೆಯನ್ನು ಮುಂದಾಗಿ ಊಹಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ಸೂಕ್ತ ಕಾರ್ಯಯೋಜನೆಯನ್ನು ರೂಪಿಸಲು, ಜಾರಿಗೊಳಿಸಲು ಒಂದು ಅಧಿಕಾರಯುಕ್ತ ನಿರ್ಣಾಯಕ ನಿಗಮವನ್ನು ಸ್ಥಾಪಿಸುತ್ತದೆ. ಬ್ಯಾಂಕುಗಳೂ ಸೇರಿದಂತೆ ಯಾವುದೇ ಹಣಕಾಸು ಸಂಸ್ಥೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದಾಗ ಈ ನಿರ್ಣಾಯಕ ನಿಗಮವು ಅಂತಹ ಹಣಕಾಸು ಸಂಸ್ಥೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಕಾರ್ಯಯೋಜನೆಯನ್ನು ರೂಪಿಸಿ ಕ್ರಮ ವಹಿಸುತ್ತದೆ. ಬ್ಯಾಂಕುಗಳ ವೈಫಲ್ಯತೆಯ ಸಂದರ್ಭಗಳಲ್ಲಿ ಠೇವಣಿದಾರರಿಗೆ ವಿಮಾ ಸೌಲಭ್ಯದ ಮೂಲಕ ಪರಿಹಾರವನ್ನು ಒದಗಿಸುವುದು ಈ ಮಸೂದೆಯ ಒಂದು ಅಂಶವಾಗಿದೆ. ಹಾಲಿ ಬ್ಯಾಂಕುಗಳಲ್ಲಿ ಹೂಡಿರುವ ಒಂದು ಲಕ್ಷ ರೂ.ಗಳವರೆಗಿನ ಠೇವಣಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಅಂಗ ಸಂಸ್ಥೆಯಾದ ಠೇವಣಿ ವಿಮಾ ಮತ್ತು ಖಾತರಿ ನಿಗಮವು ವಿಮಾ ಸೌಲಭ್ಯವನ್ನು ನೀಡುತ್ತಾ ಬಂದಿರುತ್ತದೆ. ಈಗಿನ ಪ್ರಸ್ತಾಪದಂತೆ ಈ ವಿಮಾ ಸೌಲಭ್ಯವನ್ನು ಹೆಚ್ಚಿಸಬೇಕೆಂಬುದು ಸರಕಾರದ ಇರಾದೆಯಾಗಿದೆ.

ಮುಂದಿನ ದಿನಗಳಲ್ಲಿ ದೇಶದಲ್ಲಿನ ಎಲ್ಲ ರೀತಿಯ ಹಣಕಾಸು ಯಾ ವಿಮಾ ಸಂಸ್ಥೆಗಳೂ ಈ ನಿಗಮದ ಪರಿವೀಕ್ಷಣೆಗೆ ಒಳಪಡುತ್ತದೆ. ನಿಗಮವು ಎಲ್ಲ ಹಣಕಾಸು ಯಾ ವಿಮಾ ಸಂಸ್ಥೆಗಳನ್ನು ಅವುಗಳ ವೈಫಲ್ಯ ಸಾಧ್ಯತೆಯ ಆಧಾರದಲ್ಲಿ ಕನಿಷ್ಟ ಅಪಾಯ (Low Risk), ಮಧ್ಯಮ ಅಪಾಯ (Moderate Risk), ಪರಿಗಣಿಸಬಹುದಾದ ಅಪಾಯ (Material Risk), ಸನ್ನಿಹಿತ ಅಪಾಯ (Imminent Risk), ನಿರ್ಣಾಯಕ ಅಪಾಯ (Critical Risk) ಸಂಸ್ಥೆಗಳನ್ನು ವಿಂಗಡಿಸುತ್ತದೆ. ಯಾವುದೇ ಸಂಸ್ಥೆಯು ನಿರ್ಣಾಯಕ ಅಪಾಯದ ಸ್ಥಿತಿ ತಲುಪಿದಲ್ಲಿ ಅಂತಹ ಸಂಸ್ಥೆಗಳನ್ನು ಈ ಪ್ರಸ್ತಾಪಿತ ನಿಗಮವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಮುಂದಿನ ಕ್ರಮವಹಿಸುತ್ತದೆ.

ಇತರೆ ಎಲ್ಲ ಅಂಶಗಳಿಗಿಂತ ಇದರಲ್ಲಿನ ಒಂದು ಅಂಶ ಠೇವಣಿದಾರರಲ್ಲಿ ಗೊಂದಲ ಮೂಡಿಸಿದೆ. ಈ ಹೊಸ ಮಸೂದೆಯಲ್ಲಿ ನಿಗಮವು ನಿರ್ಣಾಯಕ ಅಪಾಯದ ಸ್ಥಿತಿಗೆ ತಲುಪಿದ ಸಂಸ್ಥೆಗಳಿಗೆ "ಆಂತರಿಕ ಬಿಡುಗಡೆ" (Bail In) ಸೌಲಭ್ಯವನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. ಇದುವರೆಗೆ ಇಂತಹ ಸನ್ನಿವೇಶಗಳಲ್ಲಿ ಆರ್‌ಬಿಐಗೆ "ಬಾಹ್ಯ ಬಿಡುಗಡೆ" (Bail out) ಸೌಲಭ್ಯವನ್ನು ನೀಡಲು ಅವಕಾಶವಿತ್ತು. ಬಾಹ್ಯ ಬಿಡುಗಡೆ ಎಂದರೆ ಅಂತಹ ಸನ್ನಿವೇಶಗಳಲ್ಲಿ ಅಂತಹ ಸಂಸ್ಥೆಗಳು ಹೊರಗಿನಿಂದ ಸಾಲ ಪಡೆಯಲು ಅನುಮತಿ ನೀಡಿ ಅವುಗಳ ಆರ್ಥಿಕ ಸಂಕಷ್ಟಗಳಿಂದ ಹೊರಬರಲು ಅನುವು ಮಾಡಿಕೊಡುವುದಾಗಿತ್ತು. ಆಂತರಿಕ ಬಿಡುಗಡೆಯ ಸೌಲಭ್ಯದನ್ವಯ ಸಂಸ್ಥೆಯು ತಾನು ಗ್ರಾಹಕರಿಂದ ಪಡೆದಿರುವ ಠೇವಣಿಗಳನ್ನು ಉಪಯೋಗಿಸಿಕೊಂಡು ತನ್ನ ಆರ್ಥಿಕ ಸಂಕಷ್ಟಗಳಿಂದ ಹೊರಬರಲು ಅನುವು ಮಾಡಿಕೊಡಬಹುದಾಗಿರುತ್ತದೆ. ಅಂದರೆ ಅಂತಹ ಠೇವಣಿಗಳನ್ನು ಪಾಲು ಬಂಡವಾಳವಾಗಿ ಪರಿವರ್ತಿಸುವುದು ಅಥವಾ ಅಂತಹ ಠೇವಣಿಯ ಮರುಪಾವತಿಯನ್ನು ರದ್ದುಗೊಳಿಸುವುದು ಈ ಅಂಶದ ಕ್ರಮವಾಗಿರುತ್ತದೆ. ಇದು ಎಲ್ಲ ಠೇವಣಿದಾರರ ಆತಂಕಕ್ಕೆ ಎಡೆಮಾಡಿಕೊಟ್ಟಿದೆ.

ಆದರೆ, ಕೇಂದ್ರ ಸರ್ಕಾರದ ವಿತ್ತ ಮಂತ್ರಾಲಯದಿಂದ ದಿನಾಂಕ 07–12–2017ರಂದು ಬಿಡುಗಡೆಯಾದ ಪ್ರಕಟಣೆಯ ಪ್ರಕಾರ ಈ ಮಸೂದೆಯಿಂದಾಗಿ ಠೇವಣಿದಾರರಿಗೆ ಈಗ ಇರುವ ರಕ್ಷಣೆ ಖಂಡಿತವಾಗಿ ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಬದಲಿಗೆ ಹೆಚ್ಚು ನಿಯಮಬದ್ಧ ಮತ್ತು ಪಾರದರ್ಶಕವಾಗುತ್ತದೆ. ಈ ಮಸೂದೆಯಿಂದಾಗಿ ಕೇಂದ್ರ ಸರ್ಕಾರ ಬ್ಯಾಂಕಿಗೆ ಕೊಡಬಹುದಾದ ಆರ್ಥಿಕ ಸಹಾಯ ಅಥವಾ ಹೊಂದಬಹುದಾದ ನಿಯಂತ್ರಣದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ, ಬದಲಿಗೆ ಎರಡೂ ಹೆಚ್ಚಾಗುತ್ತದೆ. ಇದರಿಂದಾಗಿ ಸರ್ಕಾರವು ಸಾರ್ವಜನಿಕ ಬ್ಯಾಂಕುಗಳಿಗೆ ನೀಡುತ್ತಿರುವ ಗ್ಯಾರಂಟಿಯು ಅಬಾಧಿತವಾಗಿರುತ್ತದೆ.

ಪ್ರಸ್ತುತ ಭಾರತೀಯ ಬ್ಯಾಂಕುಗಳು ಸಾಕಷ್ಟು ಬಂಡವಾಳ, ಪ್ರಬುದ್ಧ ನೀತಿ ನಿಯಮಗಳು, ಉತ್ತಮ ಆಂತರಿಕ ನಿಯಂತ್ರಣ ವ್ಯವಸ್ಥೆಯೊಂದಿಗೆ ಸಶಕ್ತವಾಗಿದೆ. ಪ್ರಸ್ತುತ ಇರುವ ಕಾನೂನುಗಳು ಬ್ಯಾಂಕಿಂಗ್ ವ್ಯವಸ್ಥೆಯ ಸುರಕ್ಷತೆ ಮತ್ತು ಸ್ಥಿರತೆಗಳಿಗೆ ಒತ್ತು ನೀಡಿರುವುದು ಹೌದಾದರೂ ಇದನ್ನು ಇನ್ನೂ ಪರಿಣಾಮಕಾರಿಯಾಗಿಸಲು ಪ್ರಯತ್ನಿಸಲಾಗುತ್ತಿದೆ. ವಿಶ್ವದ ಬೇರೆಡೆಯ ವಿದ್ಯಾಮಾನಗಳನ್ನು ಗಮನದಲ್ಲಿಟ್ಟುಕೊಂಡು ಭಾರತದಲ್ಲಿ ಬ್ಯಾಂಕುಗಳ ವೈಫಲ್ಯತೆಯನ್ನು ನಿವಾರಿಸಲು ಮತ್ತು ಠೇವಣಿದಾರರ ಹಿತಾಸಕ್ತಿಗಳನ್ನು ಕಾಪಾಡಲು ಕೇಂದ್ರ ಸರ್ಕಾರ ಮಾಡುತ್ತಿರುವ ಪ್ರಯತ್ನವಿದು. ಇಷ್ಟೆಲ್ಲಾ ಕ್ರಮವಹಿಸಿದಾಗ್ಯೂ ಯಾವುದೇ ಬ್ಯಾಂಕು ನಷ್ಟವನ್ನನುಭವಿಸಿದಲ್ಲಿ, ವಿಫಲವಾದಲ್ಲಿ ಅತಿ ಶೀಘ್ರದಲ್ಲಿ ಪುನಶ್ಚೇತನಗೊಳಿಸುವ ಮತ್ತು ಠೇವಣಿದಾರರನ್ನು ಸಂರಕ್ಷಿಸುವ ಉದ್ದೇಶದಿಂದ ಈ ಮಸೂದೆಯನ್ನು ಮಂಡಿಸಲಾಗಿದೆ.

ಲೋಕಸಭೆಯಲ್ಲಿ ಮಂಡಿಸಲಾದ ಸದರಿ ಮಸೂದೆಯನ್ನು ಜಂಟಿ ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ. ಹಾಗೆಯೇ ಸಾರ್ವಜನಿಕರು, ಸಂಘ ಸಂಸ್ಥೆಗಳ, ಆರ್ಥಿಕ ಸಂಸ್ಥೆಗಳ, ಗ್ರಾಹಕ ವೇದಿಕೆಗಳ ಅಹವಾಲುಗಳನ್ನೂ ಆಹ್ವಾನಿಸಲಾಗಿದೆ. ಈ ಎಲ್ಲ ಪ್ರಕ್ರಿಯೆಯ ನಂತರ ಅಗತ್ಯವೆನಿಸಿದಲ್ಲಿ ಶಿಫಾರಸ್ಸುಗಳನ್ನು, ಬದಲಾವಣೆಗಳನ್ನು ಅಳವಡಿಸಿಕೊಂಡು ನೂತನ ಮಸೂದೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ.

ಇತ್ತೀಚಿನ ಒಂದು ಪತ್ರಿಕಾ ವರದಿಯ ಪ್ರಕಾರ ಸರ್ಕಾರ ಠೇವಣಿ ವಿಮಾ ಮೊತ್ತವನ್ನು ಒಂದು ಲಕ್ಷ ರೂಪಾಯಿಗಳಿಂದ ಎರಡೂವರೆ ಲಕ್ಷ ರೂಪಾಯಿಗಳಿಗೆ ಏರಿಸುವ ಇರಾದೆ ಹೊಂದಿದೆ ಎನ್ನಲಾಗಿದೆ. ಅಂದರೆ, ಈ ಮಸೂದೆಯಿಂದಾಗಿ ಸಣ್ಣ ಠೇವಣಿದಾರರು ತಾವು ಹೊಂದಿರುವ ಎರಡೂವರೆ ಲಕ್ಷ ರೂಪಾಯಿಗಳವರೆಗಿನ ಠೇವಣಿಗಳಿಗೆ ಆತಂಕ ಹೊಂದುವ ಅಗತ್ಯವಿಲ್ಲ ಮತ್ತು ಉಳಿದವರಿಗೂ ಕೂಡ ಈ ಮಸೂದೆಯಿಂದಾಗಿ ಯಾವುದೇ ಹೊಸ ತೊಂದರೆ ಬರುವುದಿಲ್ಲ. ಏಕೆಂದರೆ ಈ ಹಿಂದೆ ಕೂಡ ಒಂದು ಲಕ್ಷಕ್ಕಿಂತ ಹೆಚ್ಚು ಠೇವಣಿ ಹೊಂದಿದವರಿಗೆ ಬ್ಯಾಂಕುಗಳ ವೈಫಲ್ಯತೆಯ ಸಂದರ್ಭದಲ್ಲಿ ಯಾವುದೇ ರಕ್ಷಣೆಯಿರಲಿಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ಮತ್ತು ಭಾರತದ ಆರ್ಥಿಕ ಕ್ಷೇತ್ರವನ್ನು ಇನ್ನೂ ಸಶಕ್ತಗೊಳಿಸುವ ಆಲೋಚನೆಯಿಂದ ಮಂಡಿಸಲ್ಪಟ್ಟಿರುವ ಈ ಮಸೂದೆಯನ್ನು ನಾವು ಗ್ರಾಹಕರಾಗಿ ಸ್ವಾಗತಿಸೋಣ.

# Gap Analysis and Co-operative Banks

Mahadevswamy, AGM RBI Bangalore (Retd.)

Gap analysis refers to the process through which a company, an institution compares its actual performance to its expected performance to determine whether it is meeting expectations and using its resources effectively. Gap analysis seeks to define the current state of an institution or a company and the target state of the same company or organization. By defining and analyzing these gaps, a business management team can create an action plan to move the organization forward and fill the gaps in performance.

**Gap Analysis in Asset Management :** Gap analysis is also a method of asset-liability management that can be used to assess interest rate risk or liquidity risk, excluding credit risk. It is a simple Internal Rate of Return (IRR) measurement method that conveys the difference between rate-sensitive assets and rate-sensitive liabilities over a given period of time. This type of analysis works well if assets and liabilities are compromised of fixed cash flows.

One way to measure the direction and extent of asset-liability mismatch is by using gap analysis. The analysis derives its name from the "gap" which is the difference between the amounts of Rate Sensitive Asset (RSA) and Rate Sensitive Liabilities (RSL).

In banking institutions, asset and liability management is the practice of managing various risks that arise due to mismatches between the assets and liabilities (loans and advances) of the bank.

Banks face several risks such as the risks associated with assets, interest, currency exchange risks. Asset Liability management (ALM) is at tool to manage interest rate risk and liquidity risk faced by various banks and other financial institutions.

**Interest Rate Risk (IRR) :** The phased deregulation of interest rates and the operational flexibility given to banks in pricing most of the assets and liabilities necessitates for the banking system to hedge the Interest Rate Risk. Interest rate risk is the risk where changes in market interest rates might adversely affect a bank's financial condition. The changes in interest rates affect banks in a larger way. The immediate impact of changes in interest rates is on bank's profits by changing its spread [Net Interest Income (NII)]. The Gap or Mismatch risk can be measured by calculating Gaps over different time intervals as at a given date. Gap analysis measures mismatches between rate sensitive liabilities and rate sensitive assets (including off-balance sheet positions).

ALM refers to efforts by a bank's board and senior management team to carefully balance the bank's current and long-term potential earnings with the need to maintain adequate liquidity and appropriate interest rate risk (IRR) exposures. Each bank has a distinct strategy, customer base, product selection, funding distribution, asset mix, and risk profile. These differences require that assessments of risk exposures and risk management practices be customized to each bank's specific risks and activities and not take a one-size-fits-all approach.

ALM can be termed as a risk management technique designed to earn an adequate return while maintaining a comfortable surplus of assets beyond liabilities It takes into consideration interest rates, earning power, and degree of willingness to take on debt and hence is also known as Surplus Management

ALM is an integral part of the financial management process of any bank. ALM is concerned with strategic balance sheet management involving risks caused by changes in the interest rates, exchange rates and the liquidity position of the bank. While managing these three risks forms the crux of ALM, credit risk and contingency risk also form a part of the ALM

ALM Guidelines covering operating Guidelines on Risk Management were first issued by Reserve Bank of India on October 7, 1999 covering broad contours for management of credit, liquidity, interest rate, foreign exchange and operational risks. In December 2000

Asset Liability Management and Co-operative Banks :

After the implementation of banking sector reforms during the late1990s and 2000s, paving the way for level playing field for all the players, Reserve Bank of India felt that Urban Co-operative Banks (UCBs) which were operating in a fairly deregulated environment and are required to determine their own interest rates on deposits (other than saving account) and interest rates on their advances. The interest rates on banks' investments in government and other permissible securities are also market related. Intense competition for business, involving both the assets and

liabilities, together with increasing volatility in the domestic interest rates as well as foreign

exchange rates, has brought pressure on the management of banks to maintain an optimal balance between spreads, profitability and long-term viability. Hither through Co-operative banks were employing unscientific and adhoc methods to determine the rate of interest on deposits leading to imprudent liquidity management.

Similarly loan products were also priced without taking into account the cost of funds leading to flight of top borrowers to other credit institutions. So, there was a telling need for Co-operative Banks managements to base their business decisions on sound risk management systems with the ultimate objective of protecting the interest of depositors and stakeholders. It is, therefore, important that UCBs introduce effective Asset-Liability Management (ALM) systems to address the issues related to liquidity, interest rate and currency risks. reputational risks in view of their asset-liability composition. With liberalisation in Indian financial markets over the last few years and growing integration of domestic markets with external markets, the risks associated with banks' operations have become complex and large, requiring strategic management. Since the urban co-operative banking sector is an integral part of the financial system and many of the larger urban co-operative banks are undertaking business as varied as in the case of commercial banks, the Reserve Bank of India felt that there was an imperative need for the bigger UCBs in particular, and UCBs in general, to put in place appropriate internal control and risk management systems. As a tool of management of risk co-operative banks with deposits of Rs.100 crore and above (Tier II) were advised to implement ALM and constitute and Asset Liability Committee (ALCO) with effect from September 2008. In order to capture the maturity structure of the cash inflows and outflows, Banks were advised to prepare the Statement of Structural Liquidity. The Maturity Profile for measuring the future cash flows of UCBs in different time bands were i) 1 to 14 days ii) 15 to 28 days iii) 29 days and up to 3 months iv) Over 3 months and up to 6 months v) Over 6 months and up to 1 year vi) Over 1 year and up to 3 years vii) Over 3 years and up to 5 years and viii) Over 5 years.RBI had also advised that tolerance level in respect of first two buckets 1-14 days and 15-28 days should not cross 20%.

Co-operative Banks have been preparing ALM statements and reporting the same to RBI on a quarterly basis.

## ಜಿಡಿಪಿ ಬೆಳವಣಿಗೆ ಶೇ.7.2ಕ್ಕೆ ಜಿಗಿತ




**ಹೊಸದಿಲ್ಲಿ :** ಭಾರತದ ಜಿಡಿಪಿ ಬೆಳವಣಿಗೆಯ ದರ ಕಳೆದ ಅಕ್ಟೋಬರ್ ಡಿಸೆಂಬರ್ ತ್ರೈಮಾಸಿಕ ಅವಧಿಯಲ್ಲಿ ಶೇ.7.2ಕ್ಕೆ ಜಿಗಿದಿದ್ದು, ವಿಶ್ವದಲ್ಲಿಯೇ ಅತ್ಯಂತ ವೇಗದಲ್ಲಿ ಬೆಳವಣಿಗೆ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಾಗಿ ಚೀನಾವನ್ನು ಹಿಂದಿಕ್ಕಿದೆ.


ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಜಿಡಿಪಿ (ಒಟ್ಟು ರಾಷ್ಟ್ರೀಯ ಉತ್ಪನ್ನ) ಶೇ.6.3ರಷ್ಟಿತ್ತು. ದೇಶದ ಉತ್ಪಾದನೆ ವಲಯದ ಚೇತರಿಕೆ ಹಾಗೂ ಸಾರ್ವಜನಿಕ ವೆಚ್ಚದಲ್ಲಿ ಹೆಚ್ಚಳದ ಪರಿಣಾಮ ಆರ್ಥಿಕತೆ ಪ್ರಗತಿಯ ಹಳಿಗೆ ಮರಳಿದೆ. 2016ರ ನವೆಂಬರ್‌ನಲ್ಲಿ ನಡೆದ ಐತಿಹಾಸಿಕ ನೋಟು ಅಮಾನ್ಯತೆ ಹಾಗೂ 2018ರ ಜುಲೈನಲ್ಲಿ ಜಾರಿಯಾದ ಮಹತ್ವದ ಜಿಎಸ್‌ಟಿಯ ಆರಂಭಿಕ ಹಂತದ ಸಂಕೀರ್ಣ ಸಮಸ್ಯೆಗಳಿಂದ ಆರ್ಥಿಕತೆ ಹೊರಗೆ ಬಂದಿದ್ದು, ನೂತನ ವ್ಯವಸ್ಥೆಗೆ ಹೊಂದಿಕೊಂಡಿರುವುದನ್ನು ಹಾಗೂ ಪ್ರಗತಿ ದಾಖಲಿಸಿರುವುದನ್ನು ಇದು ಬಿಂಬಿಸಿದೆ. ಈ ಬೆಳವಣಿಗೆಯೊಂದಿಗೆ ಭಾರತವು ಒಂದು ವರ್ಷದೊಳಗೆಯೇ, ವಿಶ್ವದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ ಎಂಬ ಹೆಗ್ಗಳಿಕೆಯನ್ನು ಮತ್ತೆ ತನ್ನದಾಗಿಸಿದೆ.

ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಹೆಚ್ಚುತ್ತಿರುವ ವಸೂಲಾಗದ ಸಾಲ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಗರಣದಿಂದ ಟೀಕೆ ಎದುರಿಸುತ್ತಿರುವ ಮೋದಿ ಸರಕಾರಕ್ಕೆ, ಟೀಕಾಕಾರರ ಬಾಯಿ ಮುಚ್ಚಿಸಲು ಜಿಡಿಪಿ ಬೆಳವಣಿಗೆಯ ಪುಷ್ಟಿ ಸಿಕ್ಕಿದೆ. 2017–18ರ ಮೂರನೇ ತ್ರೈಮಾಸಿಕದಲ್ಲಿ ಜಿಡಿಪಿ ಶೇ.6.7ರ ಬೆಳವಣಿಗೆ ದಾಖಲಿಸಿತ್ತು. ಜನವರಿಯಲ್ಲಿ 8 ಪ್ರಮುಖ ಮೂಲ ಸೌಕರ್ಯ ಕ್ಷೇತ್ರಗಳು ಶೇ.6.7ರಷ್ಟು ಪ್ರಗತಿ ದಾಖಲಿಸಿವೆ. ಕಳೆದ ವರ್ಷ ಇದೇ ಅವಧಿಯಲ್ಲಿ ಶೇ.3.4ಕ್ಕೆ ಪ್ರಗತಿ ಕುಂಠಿತವಾಗಿತ್ತು. ಇದು ಕೂಡ ಆರ್ಥಿಕತೆ ಸರಿಯಾದ ದಿಕ್ಕಿನಲ್ಲಿ ದಾಪುಗಾಲಿಡುತ್ತಿರುವುದನ್ನು ಬಿಂಬಿಸಿದೆ.

ಕೇಂದ್ರ ಸರಕಾರವು ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಭಾರಿ ಮೊತ್ತದ ಬಂಡವಾಳ ನೆರವು ನೀಡಿದೆ. ಮೂಲ ಸೌಕರ್ಯ ಹಾಗೂ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ದೊಡ್ಡ ಮೊತ್ತದ ವೆಚ್ಚವನ್ನು ಮಾಡುತ್ತಿದೆ. ಇದು ಕೂಡ ಆರ್ಥಿಕ ಚಟುವಟಿಕೆ ಗರಿಗೆದರಲು ಕಾರಣವಾಗಿದೆ. ವಿಶ್ವ ಬ್ಯಾಂಕ್‌ನ ಬಿಸಿನೆಸ್‌ಸ್ನೇಹಿ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತದ ರಾರಯಂಕ್ 30 CAR ಮೇಲೇರಿದ್ದು, 100ರ ಒಳಗೆ ಮೊದಲ ಸಲ ಬಂದಿದೆ. ಐಎಂಎಫ್ ಪ್ರಕಾರ ದೇಶದ ಜಿಡಿಪಿ ದರ 2018ರಲ್ಲಿ ಶೇ.7.4 ಹಾಗೂ 2019ರಲ್ಲಿ ಶೇ.7.8ಕ್ಕೆ ಏರಿಕೆಯಾಗುವ ನಿರೀಕ್ಷೆ ಇದೆ. ವಿಶ್ವದ 7ನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಭಾರತ 2005 ಮತ್ತು 2008ರ ನಡುವೆ ವಾರ್ಷಿಕ ಸರಾಸರಿ ಶೇ.9ರ ಪ್ರಗತಿ ದಾಖಲಿಸಿತ್ತು.

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 28

# RBI NEWS - FEBRUARY 2018



**K. Vittal Shetty,** Banking Consultant, kohimavittal@Hotmail.com, Mob : 9845699904

**Feb 07, 2018 :** Sixth Bi-monthly Monetary Policy Statement, 2017-18 Resolution of the Monetary Policy Committee (MPC) Reserve Bank of India

On the basis of an assessment of the current and evolving macroeconomic situation at its meeting today, the Monetary Policy Committee (MPC) decided to:

- **keep the policy repo rate under the liquidity adjustment facility (LAF) unchanged at 6.0 per cent.**

Consequently, the reverse repo rate under the LAF remains at 5.75 per cent, and the marginal standing facility (MSF) rate and the Bank Rate at 6.25 per cent.

The decision of the MPC is consistent with the neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

**The next meeting of the MPC is scheduled on April 4 and 5, 2018.**

| Policy Rates with effect from 02 AUGUST 2017 | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 14 OCTOBER 2017 | 19.50% |

Date : Feb 28, 2018

Scheduled Banks' Statement of Position in India as on Friday, February 16, 2018

(Amount in Billions of Rs)

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 17-FEB-2017 | 02-FEB-2018* | 16-FEB-2018 | 17-FEB-2017 | 02-FEB-2018* | 16-FEB-2018* |
| I | a) Deposits | 104398.16 | 111086.85 | 110523.85 | 107236.97 | 114053.75 | 113490.38 |
| | i) Demand | 10576.48 | 11486.63 | 11355.59 | 10838.32 | 11765.53 | 11629.97 |
| | ii) Time | 93821.68 | 99600.23 | 99168.25 | 96398.64 | 102288.23 | 101860.4 |
| IV | CASH | 571.45 | 619.22 | 612.71 | 591.89 | 635.54 | 629.58 |
| V | BALANCES WITH R.B.I. (B) | 4282.35 | 4423.38 | 4504.29 | 4406.01 | 4546.92 | 4624.13 |
| VII | INVESTMENTS | 33276.96 | 34218.65 | 34142.72 | 34184.4 | 35165.98 | 35047.95 |
| VIII | BANK CREDIT | 74588.5 | 82610.97 | 82535.16 | 76886.79 | 85130.74 | 85056.57 |

**Feb 22, 2018 : Aditya Birla Idea Payments Bank Limited commences operations**

Aditya Birla Idea Payments Bank Limited has commenced operations as a payments bank with effect from February 22, 2018. The Reserve Bank has issued a licence to the bank under Section 22 (1) of the Banking Regulation Act, 1949 to carry on the business of payments bank in India.

Aditya Birla Nuvo Limited, Mumbai was one of the 11 applicants which were issued in-principle approval for setting up a payments bank, as announced in the press release on August 19, 2015.

**Directions, Withdrwals, Penalties & Cancellation of Licences of Urban Co-operative Banks.**

**1) Feb 01, 2018 :** The Sircilla Co-operative Urban Bank Ltd., Sircilla, Telangana – Penalised. RBI a monetary penalty of Rs. 0.50 lakh (Rupees Fifty thousand only), for violation of RBI directives and guidelines on Exposure Norms and Statutory/Other Restrictions and Know Your Customer (KYC) Norms/Anti-Money Laundering(AML) Measures.

**2) Feb 14, 2018 :** Cancellation of licence to carry on banking business in India and Voluntary Conversion of Urban Co-operative Bank into a Co-operative Society under Sections 22 and 36A(2) of the Banking Regulation Act, 1949 (As Applicable to Co-operative Societies) – Sher Nagrik Sahakari Bank Ltd., Jabalpur (Madhya Pradesh)

**3) Feb 20, 2018 :** RBI penalised Rs. 1,00,000/- (Rupees one lakh only) Bedkihal Urban Cooperative Bank Ltd., Bedkihal, Karnataka for violation of directives/guidelines of Reserve Bank of India on Exposure Norms.

**4) Feb 27, 2018 :** The Kuppam Co-operative Town Bank Ltd., Kuppam, Andhra Pradesh – Penalised monetary penalty of Rs. 0.50 lakh (Rupees Fifty thousand only), for violation of RBI directives and guidelines on loans and advances to directors and their relatives.

**5) Feb 28, 2018 :** Directions under Section 35A of the Banking Regulation Act, 1949 (AACS) – The Maratha Sahakari Bank Ltd, Mumbai, Maharashtrawas placed under directions from close of business on August 31, 2016 vide directive dated August 31, 2016, It is hereby notified for the information of the public that, the validity of which was last extended upto February 28, 2018 shall continue to apply to the bank for a further period of six months from March 01, 2018 to August 31, 2018, vide Directive dated February 26, 2018.

**Source: www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : 2ನೇ ಮಹಡಿ, ನಂ. 62, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ. : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010